ANANTHKUMAR PRATISHTHANA

# ಅನಂತಪಥ

ಪುಟ 7
ವ್ಯಕ್ತಿ ವಿಶೇಷ ಮಾಲಿಕೆ
ಪಿ. ಎನ್. ಓಕ್



ಸಂಪುಟ - 4 ಏಪ್ರಿಲ್ - 2024 ಸಂಚಿಕೆ - 46

## ಉತ್ತರ ಭಾರತದ ಚುನಾವಣೆಗಳಲ್ಲಿ ಅನಂತ ತಂತ್ರಕೌಶಲ



೨೦೧೪ ಜಾರ್ಖಂಡ್ ರಾಜ್ಯದಲ್ಲಿ ವಿಧಾನಸಭಾ ಚುನಾವಣೆಯ ಪ್ರಕ್ರಿಯೆ ನಡೆದಿತ್ತು. ಆ ಸಮಯಕ್ಕೆ ಜಾರ್ಖಂಡ್‌ನಲ್ಲಿ ಭಾರತೀಯ ಜನತಾ ಪಕ್ಷದ ಸ್ಥಿತಿ ಶೋಚನೀಯವಾಗಿತ್ತು. ಕಳೆದ ಎರಡು ಚುನಾವಣೆಗಳಲ್ಲಿ ಪಕ್ಷದ ಗಳಿಕೆ ಅಧೋಮುಖವಾಗಿತ್ತು. ಇಂಥ ಸ್ಥಿತಿಯಲ್ಲಿ ಪಕ್ಷದ ಸ್ಥಿತಿಗತಿಗಳನ್ನು ಸುಧಾರಿಸಬಲ್ಲ, ವಿಪರೀತ ಪರಿಸ್ಥಿತಿಯಲ್ಲೂ ಜಯ ತಂದುಕೊಡಬಲ್ಲ ಸಾಮರ್ಥ್ಯವುಳ್ಳವರು ಅನಂತಕುಮಾರ್ ಒಬ್ಬರೇ ಎಂದು ಅರಿತಿದ್ದ ಪಕ್ಷದ ಕೇಂದ್ರಸಮಿತಿ ಅವರನ್ನೇ ಜಾರ್ಖಂಡ್ ಚುನಾವಣೆಗಾಗಿ ಪಕ್ಷದ ಉಸ್ತುವಾರಿಯಾಗಿ ನೇಮಿಸಿ ಕಳುಹಿಸಿತು. ಆ ವೇಳೆಗೆ ಅನಂತಕುಮಾರ್ ಸಂಸತ್ಸದಸ್ಯರಾಗಿ, ಪಕ್ಷದ ವಿವಿಧ ಹುದ್ದೆಗಳಲ್ಲಿ ಪದಾಧಿಕಾರಿಯಾಗಿ, ಕೇಂದ್ರದಲ್ಲಿ ಮಂತ್ರಿಯಾಗಿ ಸಾಕಷ್ಟು ಅನುಭವಗಳನ್ನು ಗಳಿಸಿದ್ದುದರಿಂದಲೂ ಈ ಆಯ್ಕೆ ಸೂಕ್ತವೇ ಆಗಿದ್ದಿತು. ಜಾರ್ಖಂಡ್ ಎಂಬ ಗುಡ್ಡಗಾಡುಗಳ ರಾಜ್ಯವು ಆ ಕಾಲಕ್ಕೆ ನಕ್ಸಲೀಯರ ಆಡುಂಬೊಲವಾಗಿತ್ತು. ಪ್ರಮುಖ ಪಟ್ಟಣಗಳನ್ನು ಹೊರತುಪಡಿಸಿದರೆ ಇತರ ಯಾವ ಊರುಗಳಿಗೂ ರಸ್ತೆಗಳಿರಲಿಲ್ಲ. ಕಾರ್ಯಕರ್ತರಂತೂ ಹತೋತ್ಸಾಹಿಗಳಾಗಿದ್ದರು. ಇಂತಹ ಸಂದರ್ಭದಲ್ಲಿ "ರಾಜ್ಯದ ಅಧ್ಯಕ್ಷರು, ಎಲ್ಲ ಪದಾಧಿಕಾರಿಗಳು, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳು ಮತ್ತು ಮಾಜಿ ಕೇಂದ್ರ ಮಂತ್ರಿಗಳು ಬೈಕ್ ರ‍್ಯಾಲಿಯ ಮೂಲಕ ರಾಜ್ಯ ಪ್ರವಾಸ ಮಾಡುತ್ತಿದ್ದಾರೆ" ಎಂಬ ಸುದ್ದಿ ಎಲ್ಲ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಒಬ್ಬ ಮರಿ ಪುಡಾರಿಯೂ ದೊಡ್ಡದೊಡ್ಡ ಕಾರುಗಳಲ್ಲಿ ಅಂಗರಕ್ಷಕರೊಡನೆ ತಿರುಗಾಡುತ್ತಿದ್ದ ಸಮಯದಲ್ಲಿ ಇಷ್ಟು ಹಿರಿಯ ನಾಯಕರು ಬೈಕ್ ರ‍್ಯಾಲಿಯಲ್ಲಿ ಹೊರಡುವುದೆಂದರೇನು? ಅದೂ, ನಕ್ಸಲ್ ಪೀಡಿತ ಪ್ರದೇಶಗಳಲ್ಲಿ! ಆದರೆ, ಅನಂತಕುಮಾರ್ ವಿಚಾರವೇ ಬೇರೆಯಿತ್ತು. ರಾಜ್ಯದ ಅನೇಕ ಹಿಂದುಳಿದ ಪ್ರದೇಶಗಳನ್ನು ಅದುವರೆಗೆ ಯಾವ ನಾಯಕರೂ ಭೇಟಿ ಮಾಡಿರಲಿಲ್ಲ. ರಾಜ್ಯದಲ್ಲಿ ಬುಡಕಟ್ಟು ಜನಾಂಗದವರೇ ಅತ್ಯಧಿಕ ಸಂಖ್ಯೆಯಲ್ಲಿದ್ದರು. ಆದುದರಿಂದ ಬೈಕ್ ಮೂಲಕ ಪ್ರತಿಯೊಂದು ಹಳ್ಳಿಯನ್ನೂ ಪ್ರತಿಯೊಬ್ಬ ಮತದಾರನನ್ನೂ ತಲುಪಬಹುದೆಂದು ಅವರು ಯೋಚಿಸಿದ್ದರು. ಅದು ನಿಜವೂ ಆಯಿತು. ಪಕ್ಷವು ಬುಡಕಟ್ಟು ಜನಾಂಗದ ವಿಶ್ವಾಸವನ್ನು ಗಳಿಸಲು ಯಶಸ್ವಿಯಾಯಿತು. ಪರಿಣಾಮವಾಗಿ ಪಕ್ಷವು ಮಿತ್ರಪಕ್ಷದ ಜೊತೆಗೆ ಸ್ಪಷ್ಟ ಬಹುಮತ ಗಳಿಸಿ ಅಧಿಕಾರಕ್ಕೆ ಬಂದಿತು.

ತಮ್ಮ ಸ್ಥಳವಾದ ಬೆಂಗಳೂರಿನಂತಹ ಸುಶಿಕ್ಷಿತರ ಕ್ಷೇತ್ರದಿಂದ ಜಾರ್ಖಂಡ್ ನಂತಹ ಅತ್ಯಂತ ಹಿಂದುಳಿದ ರಾಜ್ಯಕ್ಕೆ ತೆರಳಿ ಚುನಾವಣೆಯ ಜವಾಬ್ದಾರಿ ನಿರ್ವಹಿಸುವಾಗ ಅನಂತಕುಮಾರ್ ಅನೇಕ

ಪುಟ 9 ರಲ್ಲಿ ಮುಂದುವರಿದಿದೆ

## "ಸಾಮಾನ್ಯ ಕಾರ್ಯಕರ್ತ ದೇಶದ ನೀತಿ ನಿರೂಪಕನಾದ ಅಚ್ಚರಿ"- ಪ್ರಲ್ಹಾದ್ ಜೋಶಿ



ರಾಷ್ಟ್ರಕ್ಕಾಗಿ ಸಮರ್ಪಿತ ಜೀವನವನ್ನು ನಡೆಸಿದ ಅನಂತಕುಮಾರರ ಜೀವನದ ಪ್ರತಿಯೊಂದು ಘಟನೆಯೂ ಕಿರಿಯರಿಗೆ ಪ್ರೇರಣೆ ನೀಡುವಂತಿದೆ. ಅನಂತಕುಮಾರರ ಜೀವನಶೈಲಿಯನ್ನು ಹಾಗೂ ಕಾರ್ಯವೈಖರಿಯನ್ನು ಬಿಂಬಿಸುವ ಸ್ಮರಣಿಕೆಗಳು ಮತ್ತು ಛಾಯಾಚಿತ್ರಗಳನ್ನು ಒಂದೆಡೆ ಸಂಗ್ರಹಿಸಿ ಇಡುವುದರ ಜೊತೆಗೆ ಅವರ ಧ್ಯೇಯಾದರ್ಶಗಳನ್ನು ಬಿಂಬಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಉದ್ದೇಶದಿಂದ ಹುಬ್ಬಳ್ಳಿಯ ವಿಜಯನಗರದಲ್ಲಿ ೦೫/೦೩/೨೦೨೩ರಂದು ಪ್ರಾರಂಭವಾದ ಅನಂತ ಪ್ರೇರಣಾ ಕೇಂದ್ರವು ಒಂದು ವರ್ಷ ಪೂರೈಸಿದ ಸಂದರ್ಭದಲ್ಲಿ ವಾರ್ಷಿಕೋತ್ಸವವನ್ನು ಆಚರಿಸಲಾಯಿತು.

೨೪/೦೩/೨೦೨೪ರಂದು ಅನಂತ ಪ್ರೇರಣಾ ಕೇಂದ್ರದ ಪ್ರಥಮ ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿದ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, "ರಾಜಕೀಯ ಒತ್ತಡದಲ್ಲಿದ್ದರೂ, ಅನಂತಕುಮಾರರು ನೋವನ್ನು ನುಂಗಿ ಸದಾಕಾಲ ಉಲ್ಲಸಿತರಾಗಿ, ನಗುಮುಖದಿಂದಲೇ ಸ್ಪಂದಿಸುತ್ತಿದ್ದರು. ಅವರ ನೆನಪಿನಲ್ಲಿ ಆರಂಭವಾದ 'ಅನಂತ ಪ್ರೇರಣಾ ಕೇಂದ್ರ' ರಾಷ್ಟ್ರೀಯ ಮಟ್ಟದ ಚಿತ್ರ ಪ್ರದರ್ಶಿನಿಯನ್ನು ಪ್ರಾರಂಭಿಸಿ ಅನಂತಕುಮಾರರ ವ್ಯಕ್ತಿತ್ವವನ್ನು ಮುಂದಿನ ಪೀಳಿಗೆಗಳಿಗೆ ಪರಿಚಯಿಸುತ್ತಿದೆ. ರಾಷ್ಟ್ರಮಟ್ಟದಲ್ಲಿ ಇದು ಸಶಕ್ತವಾಗಿ, ಕ್ರಿಯಾಶೀಲವಾಗಿ ಬೆಳೆಯುತ್ತಿರುವುದು ನನಗೆ ಸಂತಸ ತಂದಿದೆ" ಎಂದರು.

ರಾಜ್ಯದಲ್ಲಿ ಬಿಜೆಪಿಗೆ ಶಕ್ತಿ ತುಂಬಿ ಆಡಳಿತ ಸೂತ್ರ ಹಿಡಿಯಲು ಅನಂತಕುಮಾರರು ಕಾರಣ. ಸಾಮಾನ್ಯ ಕುಟುಂಬದಿಂದ ಬಂದ ಅನಂತಕುಮಾರರು ದೇಶದ ನೀತಿ ನಿರೂಪಿಸುವಂಥ ಮಹತ್ವದ ಹುದ್ದೆಗಳನ್ನು ನಿರ್ವಹಿಸಿದ್ದು ಅಭಿಮಾನದ ಸಂಗತಿ ಎಂದೂ ಅವರು ಹೇಳಿದರು. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಹಿರಿಯ ಪ್ರಚಾರಕರಾದ ಸು. ರಾಮಣ್ಣ ಮಾತನಾಡಿ, ನಾಯಕರಾದವರು ಜನಪ್ರಿಯರಾಗುವುದಕ್ಕಿಂತ ಶ್ರೇಷ್ಠರಾಗಿಬೇಕು. ಜನಪ್ರಿಯತೆಯು ವ್ಯಕ್ತಿಯನ್ನು ಬದುಕಿದ್ದಾಗಲೇ ನಾಶಮಾಡುತ್ತದೆ. ಆದರೆ ಶ್ರೇಷ್ಠ ವ್ಯಕ್ತಿಯು ಸಾವಿನ ನಂತರವೂ ಜನಮಾನಸದಲ್ಲಿ ಬದುಕಿರುತ್ತಾನೆ ಎಂದರು. ಮಾಜಿ ಪ್ರಧಾನಿ ನೆಹರು ಹಾಗೂ ಆರ್.ಎಸ್.ಎಸ್. ಸಂಸ್ಥಾಪಕ ಡಾ. ಕೇಶವ್ ಬಲಿರಾಮ್ ಹೆಡಗೆವಾರ್ ಅವರನ್ನು ಉದಾಹರಿಸಿದ ರಾಮಣ್ಣ, "ನೆಹರೂ ಜನಪ್ರಿಯರೆಂಬುದರಲ್ಲಿ ಅನುಮಾನವಿಲ್ಲ.

ಪುಟ 6 ರಲ್ಲಿ ಮುಂದುವರಿದಿದೆ




ದೆಹಲಿಯ ಗುರುಗಾಂವ್‌ನ ಗುರುಗಾಂವ್ ಕನ್ನಡ ಸಂಘವು ಯುಗಾದಿ ನಿಮಿತ್ತ ಹಮ್ಮಿಕೊಂಡಿದ್ದ **"ಸಾಂಸ್ಕೃತಿಕ ಸಂಭ್ರಮ"** ಸಮಾರಂಭವನ್ನು ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಉದ್ಘಾಟಿಸಿ ಮಾತನಾಡಿದರು . ಇದೇ ಸಂದರ್ಭದಲ್ಲಿ ಅವರನ್ನು ಸನ್ಮಾನಿಸಲಾಯಿತು.

# ಅರಸೀಕೆರೆಯ ಶಿವ ದೇವಾಲಯ

ಶ್ರದ್ಧೆಯ ಶಿಲ್ಪ

ಟಿ. ಎಸ್. ಗೋಪಾಲ್



ಹಾಸನ ಜಿಲ್ಲೆಯ ಪ್ರಮುಖ ವಾಣಿಜ್ಯ ಕೇಂದ್ರವೆನಿಸಿರುವ ಅರಸೀಕೆರೆಯ ಹೆಸರಿನ ಪ್ರಸಿದ್ಧಿಯೇನಿದ್ದರೂ ಇಲ್ಲಿ ಕೆರೆಯೊಂದನ್ನು ಕಟ್ಟಿಸಿದ ಹೊಯ್ಸಳರಾಣಿಯೊಬ್ಬಳಿಗೆ ಸಲ್ಲಬೇಕು. ಬೆಂಗಳೂರು-ಹೊನ್ನಾವರ ಹೆದ್ದಾರಿಯಲ್ಲಿರುವ ಅರಸೀಕೆರೆಗೆ ಹೊಯ್ಸಳರ ಆಡಳಿತಕಾಲದಲ್ಲಿ ಬಲ್ಲಾಳಪುರ ಎಂದೂ ಹೆಸರಿತ್ತಂತೆ. ಅರಸೀಕೆರೆಯಿಂದ ಹುಳಿಯಾರಿನ ಕಡೆಗೆ ಸಾಗುವ ರಸ್ತೆಯಲ್ಲಿ ಒಂದು ಕಿಲೋಮೀಟರ್ ಹೋದರೆ, ಕಾಣಸಿಗುವ ಶಿವದೇವಾಲಯವು ಹೊಯ್ಸಳ ವಾಸ್ತುಶಿಲ್ಪದ ವಿಶೇಷ ನಿರ್ಮಾಣಗಳಲ್ಲೊಂದು.



ಈ ದೇವಾಲಯದ ಗೋಪುರವೂ ಮುಂಭಾಗದ ಮಂಟಪವೂ ಇತರ ಹೊಯ್ಸಳ ಗುಡಿಗಳಿಗಿಂತ ವಿಭಿನ್ನ ಶೈಲಿಯಲ್ಲಿ ನಿರ್ಮಿತವಾಗಿದ್ದು ಒಮ್ಮೆಗೇ ಕಣ್ಸೆಳೆಯುವಂತಿವೆ. ವಿಸ್ತಾರವಾದ ಮುಖಮಂಟಪ, ಒರಗಲು ಕಕ್ಷಾಸನಗಳು, ಅನೇಕ ಮೂಲೆಗಳ ವಿನ್ಯಾಸ, ಭವ್ಯವಾದ ಕಂಬಗಳು, ನಕ್ಷತ್ರಾಕಾರದ ಮೂಲೆಗಳ ಮೇಲೆ ಮೊಗುಚಿದ ಹರಿಗೋಲಿನ ಆಕಾರದ ಛಾವಣಿ, ಅರಸರ ಕಾಲದಲ್ಲಿ ನೃತ್ಯ ಗೀತಗಳ ವೇದಿಕೆಯಾಗಿರುತ್ತಿದ್ದ ನವರಂಗ - ಇವೆಲ್ಲವನ್ನು ನೋಡುತ್ತಿದ್ದಂತೆಯೇ ಈ ದೇಗುಲ ಪೂರ್ವಕಾಲದಲ್ಲಿ ಕಲೆ, ನೃತ್ಯ, ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವೂ ಆಗಿದ್ದಿತೆಂಬ ಅಂಶ ಸ್ಪಷ್ಟಪಡುತ್ತದೆ. ಕಕ್ಷಾಸನ ಅಥವಾ ಒರಗುವ ಕಲ್ಲುಬೆಂಚುಗಳಿಂದ ಒಳಛಾವಣಿಯವರೆಗೆ ನಿಂತ ಚಿಕ್ಕ ಕಂಬಗಳೂ, ನಡುವಣ ವೇದಿಕೆಯಿಂದ ಮೇಲುಭಿತ್ತಿಯವರೆಗೆ ತಲುಪಿದ ದೊಡ್ಡ ಕಂಬಗಳೂ ತಿರುಗಣೆಯಂತ್ರದ ಚಳಕದೊಂದಿಗೆ ಕುಸುರಿವಿನ್ಯಾಸಗಳಿಂದಲೂ ಆಕರ್ಷಕವಾಗಿ ಕಾಣುತ್ತವೆ. ಒರಗುವ ಆಸನದ ಕೆಳಭಾಗದಲ್ಲಿ ಆನೆಗಳನ್ನು ರೂಪಿಸಿರುವುದು ಸಭಾಂಗಣದ ಅಂದವನ್ನು ಹೆಚ್ಚಿಸಿದೆ. ಒಳಗುಡಿಯ ಭುವನೇಶ್ವರಿಯಲ್ಲಿ ತಾಂಡವಮೂರ್ತಿ ಶಿವನ ಸುತ್ತ ಅಷ್ಟದಿಕ್ಪಾಲಕರಿರುವಂತೆ ನಿರೂಪಿಸಲಾಗಿದೆ. ಗರ್ಭಗುಡಿಯ ಬಾಗಿಲವಾಡ ಸೂಕ್ಷ್ಮಕೆತ್ತನೆಯಿಂದ ಕೂಡಿದೆ. ದ್ವಾರಪಟ್ಟಕದ ಮೇಲೆ ಗಜಲಕ್ಷ್ಮಿಯನ್ನು ಕಾಣಬಹುದು. ಅದರ ಮೇಲುಭಾಗದ ಪಟ್ಟಿಕೆಯಲ್ಲಿ ಗಣಪತಿ ಹಾಗೂ ತ್ರಿಮೂರ್ತಿಗಳ ಕಿರುಶಿಲ್ಪಗಳಿವೆ. ಒಳಗುಡಿಯ ಶಿವಲಿಂಗಕ್ಕೆ ನಿತ್ಯಪೂಜೆ ಸಲ್ಲುತ್ತಿದೆ. ಗರ್ಭಗುಡಿಗೆ ಅಭಿಮುಖವಾಗಿ ನಂದಿಯ ಕಿರುವಿಗ್ರಹ. ಮೇಲೆ ಗೋಪುರದ ಮುಂಭಾಗದ ಶುಕನಾಸಿಯಲ್ಲೂ ನಂದಿಯಿದ್ದು, ಗಾರೆಯ ಈ ವಿಗ್ರಹವನ್ನು ಇತ್ತೀಚೆಗೆ ಮಾಡಿರಿಸಿರುವಂತೆ ಕಾಣುತ್ತದೆ.

ಶಿವಾಲಯದ ಮಂಟಪದಂತೆಯೇ ಅದರ ಗೋಪುರದ ಆಕಾರವೂ ವಿಶಿಷ್ಟ. ಇತರ ಅನೇಕ ಹೊಯ್ಸಳ ದೇಗುಲಗಳಲ್ಲಿ ಕಾಣುವ ಹಲವು ಸ್ತರಗಳ ಮಾದರಿಯಂತಲ್ಲದೆ, ಒಂದರ ಮೇಲೊಂದು ಗೋಪುರವಿರುವಂತೆಯೂ ಮೇಲಿನ ಕಿರುವೇದಿಕೆ(ಸ್ತೂಪಿ)ಯ ಮೇಲೆ ಕಳಶವಿರುವಂತೆಯೂ ವಿನ್ಯಾಸಮಾಡಲಾಗಿದೆ. ಐದು ಹಂತಗಳ ಕಿರುಗೋಪುರಗಳಿದ್ದು, ಎಲ್ಲ ದಿಕ್ಕುಗಳಿಗೆ ಅಭಿಮುಖವಾಗಿ, ಕೆಳಹಂತದ ಒಂದೊಂದು ಕಿರುಗೋಪುರದ ಮುಂಭಾಗದಲ್ಲಿ ದೇವತಾಮೂರ್ತಿಯನ್ನು ಕಾಣಬಹುದು.

ಉಳಿದಂತೆ, ಹೊಯ್ಸಳ ಕಲೆಯ ವೈಶಿಷ್ಟ್ಯವಾದ ಸಿಂಹಮುಖ, ಬಳ್ಳಿಚಿತ್ತಾರಗಳ ಸೂಕ್ಷ್ಮ ಕೆತ್ತನೆಯಿಂದ ಇಡೀ ಗೋಪುರ ಅಲಂಕೃತವಾಗಿದೆ. ಈ ಗೋಪುರದ ಕೆಳಭಾಗದಲ್ಲಿ ಹೊರಕ್ಕೆ ಚಾಚಿಕೊಂಡಂತಿರುವ ಪ್ರಸ್ತಾರದ ಸಮತಲವು ಕೆಳಗೋಡೆಯ ಕಂಬಗಳ ಮೇಲೆ ನೆಲೆಗೊಂಡ ರೀತಿಯೂ ಸೂಕ್ಷ್ಮಕೆತ್ತನೆಯ ವಿನ್ಯಾಸವಿರುವ ಅದರ ಅಂಚುಗಳೂ ಕಟ್ಟಡದ ಅಂದವನ್ನು ಹೆಚ್ಚಿಸಿವೆ.

ಗರ್ಭಗುಡಿಯ ಹೊರಗೋಡೆಯ ಮೇಲೆಲ್ಲ ಕಂಬಗಳೂ ಆಕರ್ಷಕ ಗೋಪುರ ವಿನ್ಯಾಸಗಳೂ ಚಿತ್ರವಿಚಿತ್ರವಿನ್ಯಾಸಗಳೂ ಗಮನಸೆಳೆಯುತ್ತವೆ. ಉಳಿದ ಹೊಯ್ಸಳ ದೇವಾಲಯಗಳಲ್ಲಿ ಕಾಣುವಂತಹ ಎತ್ತರವಾದ ಜಗಲಿ, ಸಾಲುಪಟ್ಟಿಕೆಗಳೇನೂ ಇಲ್ಲಿ ಕಂಡು ಬರುವುದಿಲ್ಲ. ಜಗಲಿಯ ಮೇಲಿನ ಕಂಬಗಳು ಸೊಗಸಾದ ಕೆತ್ತನೆಯಿಂದ ಕಣ್ತುಂಬುತ್ತವೆ. ಈ ಕಂಬಗಳ ನಡುವಿನ ಅಂತರದಲ್ಲಿ ಕಿರುಗೋಪುರಗಳನ್ನು ರೂಪಿಸಿದೆ. ವಿಗ್ರಹಗಳನ್ನು ಪ್ರತ್ಯೇಕ ಕೋಷ್ಠಗಳಲ್ಲಿರಿಸದೆ, ಕಂಬಗಳ ಮುಂಭಾಗದಲ್ಲಿ ನಿಂತಿರುವಂತೆ ವಿನ್ಯಾಸಗೊಳಿಸಿರುವುದೊಂದು ವಿಶೇಷ. ಅವುಗಳ ಆಚೀಚೆಗೆ ಕಿರುಗೋಪುರಗಳು, ನಡುವಣ ಅಂತರದಲ್ಲಿ ದೊಡ್ಡದೊಂದು ಗೋಪುರ ವಿನ್ಯಾಸದ ಕೆಳಗೆ ದೇವಪರಿವಾರದವರು ಇರುವಂತೆಯೂ ರೂಪಿಸಿದೆ. ಹೊಯ್ಸಳ ಅರಸರಿಗೆ ತಮ್ಮ ಕಾಲದಲ್ಲಿ ತೀವ್ರವಾಗಿದ್ದ ಶೈವ-ವೈಷ್ಣವ ವೈಮನಸ್ಯದ ಅರಿವು ಇದ್ದೇ ಇತ್ತು. ತಾವು ಕಟ್ಟಿಸಿದ ಗುಡಿಗಳಲ್ಲಿ ಹರಿ-ಹರರಿಗೆ ಸಮಾನ ಸ್ಥಾನ ಕಲ್ಪಿಸುವ ಮೂಲಕ ಜನಮನದ ದ್ವೇಷಭಾವವನ್ನು ಶಮನಗೊಳಿಸಲೂ ಅವರು ಪ್ರಾಮಾಣಿಕವಾಗಿ ಪ್ರಯತ್ನಿಸಿದರು. ಹೀಗಾಗಿ ಅರಸೀಕೆರೆಯ ಗುಡಿಯು ಶಿವದೇವಾಲಯವಾದರೂ ಗೋಡೆಯ ಮೇಲೆಲ್ಲ ವಿಷ್ಣುರೂಪಗಳೂ ಕಾಣಸಿಗುವುದೊಂದು ವಿಶೇಷ. ಆದರೆ, ಯಾವುದೇ ವಿಗ್ರಹವೂ ಸುಸ್ಥಿತಿಯಲ್ಲಿಲ್ಲ ಎಂದೂ ಹೇಳದೆ ವಿಧಿಯಿಲ್ಲ.

ಹೊಯ್ಸಳ ವಾಸ್ತುಶಿಲ್ಪದ ಕಂಬಗಳು, ಗೋಪುರ, ಛಾವಣಿ ಮೊದಲಾದವುಗಳ ಸೊಬಗು, ವೈಶಿಷ್ಟ್ಯಗಳನ್ನು ನೋಡಿ ಸಂತೋಷಿಸುವುದಕ್ಕಾದರೂ ನೀವು ಅರಸೀಕೆರೆಯ ಶಿವಾಲಯಕ್ಕೆ ಭೇಟಿ ನೀಡಲೇಬೇಕು. ಹತ್ತಿರದಲ್ಲೇ ಮಾಲೇಕಲ್ಲು ತಿರುಪತಿಯಲ್ಲಿ ವೆಂಕಟರಮಣನ ದರ್ಶನಭಾಗ್ಯವನ್ನೂ ಪಡೆಯಬಹುದು.

**ಸೌಜನ್ಯ: ಆಕಾಶವಾಣಿ, ಮೈಸೂರು**





# ಅನಂತಯಾನ

ನಿರೂಪಣೆ : ಟಿ.ಎಸ್. ಗೋಪಾಲ್

## ಅಧ್ಯಾಯ-22 ಕ್ಯಾನ್ಸರಿನ ಕೊಡಲಿಪೆಟ್ಟು

ಗಿರಿಜಾ ಶಾಸ್ತ್ರಿಯವರ ತಂದೆ ಶ್ರೀಕಂಠ ಪಂಡಿತರು. ಅವರ ಮಕ್ಕಳಲ್ಲಿ ಮೂರನೆಯವರೇ ಪದ್ಮಶ್ರೀ ಪುರಸ್ಕೃತ ಖ್ಯಾತ ವೈದ್ಯ ಡಾ. ನೀಲಕಂಠರಾವ್ ಅವರು. ತಮ್ಮ ತಾತ ಚಂದ್ರಶೇಖರ ಪಂಡಿತರು ಮತ್ತು ತಂದೆ ಶ್ರೀಕಂಠ ಪಂಡಿತರ ಪರಂಪರೆಯನ್ನು ಮುಂದುವರಿಸಿ ನೀಲಕಂಠರಾಯರೂ ವೈದ್ಯಕೀಯ ಶಿಕ್ಷಣದಲ್ಲಿ ಆಸಕ್ತಿ ವಹಿಸಿದರು. ಮೈಸೂರಿನಲ್ಲಿ ವೈದ್ಯಕೀಯ ಪದವಿ ಪಡೆದ ನಂತರ ಎಂ.ಆರ್.ಸಿ.ಪಿ. ಶಿಕ್ಷಣಕ್ಕಾಗಿ ಅವರು ಲಂಡನ್ನಿಗೆ ಹೋದರು.

ಆ ಕಾಲಕ್ಕೆ ರಾಯಲ್ ಕಾಲೇಜ್ ಆಫ್ ಫಿಸಿಷಿಯನ್ಸ್ ಸಂಸ್ಥೆಯಲ್ಲಿ ಭಾರತೀಯ ವಿದ್ಯಾರ್ಥಿಗಳಿಗೆ ಪ್ರವೇಶವನ್ನೇನೋ ಕೊಟ್ಟುಬಿಡುತ್ತಿದ್ದರು. ಆದರೆ ಪದವಿಪ್ರದಾನ ಮಾಡುವಾಗ ಮಾತ್ರ ಅರ್ಹತೆಯನ್ನು ಕಡೆಗಣಿಸಿ, ನಿರ್ದಿಷ್ಟ ಸಂಖ್ಯೆಯ ಭಾರತೀಯ ವಿದ್ಯಾರ್ಥಿಗಳನ್ನು ಮಾತ್ರವೇ ತೇರ್ಗಡೆಮಾಡುವ ವಿಚಿತ್ರ ನಿಯಮವನ್ನು ಅನುಸರಿಸುತ್ತಿದ್ದರು. ಒಂದು ವರ್ಷ ಹತ್ತು ವಿದ್ಯಾರ್ಥಿಗಳನ್ನು ತೇರ್ಗಡೆಗೊಳಿಸುತ್ತೇವೆ, ಮುಂದಿನ ವರ್ಷ ಇಪ್ಪತ್ತು ಮಕ್ಕಳಿಗೆ ಪದವಿ ಕೊಡುತ್ತೇವೆ ಎಂಬಂತಹ ವಿಚಿತ್ರ ಧೋರಣೆ ಅವರದು. ಇದನ್ನು ನೀಲಕಂಠರಾಯರು ತೀವ್ರವಾಗಿ ವಿರೋಧಿಸಿದರು. ನೀವು ತೇರ್ಗಡೆ ಮಾಡುವುದಿದ್ದರೆ ಅರ್ಹತೆಯಿರುವ ಎಲ್ಲ ವಿದ್ಯಾರ್ಥಿಗಳನ್ನೂ ಪಾಸ್ ಎಂದು ಘೋಷಿಸಿ; ಅರ್ಹತೆ ಇಲ್ಲವಾದರೆ ಪದವಿ ಕೊಡಬೇಕಾಗಿಯೇ ಇಲ್ಲವಷ್ಟೇ. ಇದನ್ನು ಒಪ್ಪದ ಸಂಸ್ಥೆಯವರು, ಆ ವರ್ಷ ನೀಲಕಂಠರಾಯರಿಗೆ ಪದವಿಪ್ರದಾನ ಮಾಡುವುದಾಗಿ ಹೇಳಿದರು. ತಮ್ಮಂತೆಯೇ ತೇರ್ಗಡೆಯಾಗಲು ಅರ್ಹತೆಯುಳ್ಳ ಉಳಿದ ವಿದ್ಯಾರ್ಥಿಗಳಿಗೆ ಪದವಿ ಕೊಡುವುದಿಲ್ಲವೆಂದಾದರೆ ತಮಗೂ ಆ ಸಂಸ್ಥೆಯ ಪದವಿ ಬೇಕಾಗಿಲ್ಲವೆಂದು ಧಿಕ್ಕರಿಸಿ ನೀಲಕಂಠರಾಯರು ಲಂಡನ್ನಿನಿಂದ ಹಿಂತಿರುಗಿ ಬಂದುಬಿಟ್ಟರು.

ಭಾರತದ ವಿವಿಧೆಡೆಗಳಲ್ಲೂ ವಿದೇಶಗಳಲ್ಲೂ ವೈದ್ಯಕೀಯ ರಂಗದಲ್ಲಿ ಸೇವೆ ಸಲ್ಲಿಸಿದ ರಾಯರು ವಾರ್ಧಾದಲ್ಲಿರುವ ಗಾಂಧಿ ಸ್ಮಾರಕ ಕುಷ್ಠರೋಗ ಸಂಸ್ಥೆಯಲ್ಲಿ ಸೇವೆ ಸಲ್ಲಿಸತೊಡಗಿದರು. ಆಗ ಪ್ರಧಾನಿಯಾಗಿದ್ದ ಇಂದಿರಾಗಾಂಧಿಯವರೊಡನೆ ಮಾತುಕತೆ ನಡೆಸಿ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮಕ್ಕೆ ಕೇಂದ್ರಸರ್ಕಾರದ ನೆರವು ದೊರಕಿಸುವಲ್ಲಿ ಯಶಸ್ವಿಯಾದರು.

ಕುಷ್ಠರೋಗವನ್ನು ಉಂಟುಮಾಡುವ ಬ್ಯಾಕ್ಟೀರಿಯಾಗಳು ಮನುಷ್ಯದೇಹವನ್ನು ಪ್ರವೇಶಿಸಿದ ಇಪ್ಪತ್ತು ವರ್ಷಗಳ ನಂತರವೇ ಅವುಗಳ ದುಷ್ಪರಿಣಾಮ ಕಂಡುಬರುವುದು. ಕೈಬೆರಳುಗಳು ನಶಿಸುವುದೇ ಮೊದಲಾದ ವಿಕಾರಗಳು ತಲೆದೋರುವುವು. ಈ ವಿಷಯದಲ್ಲಿ ಸಂಶೋಧನೆ ನಡೆಸಿದ ಡಾ. ನೀಲಕಂಠರಾಯರು ಅತಿ ಕಡಿಮೆ ಬೆಲೆಯ ರಿಫಾಂಪಿಸಿನ್ ಎಂಬ ಮಾತ್ರೆಯನ್ನು ರೋಗಿಯು ಕೇವಲ ಒಂದೇ ಬಾರಿ ತೆಗೆದುಕೊಳ್ಳುವುದರಿಂದ ಕುಷ್ಠರೋಗವನ್ನುಂಟುಮಾಡಬಲ್ಲ ರೋಗಾಣುಗಳು ನಾಶವಾಗುತ್ತವೆ ಎಂಬುದನ್ನು ಪ್ರತಿಪಾದಿಸಿದರು. ವಾರ್ಧಾ ಪ್ರದೇಶದ ನೂರಾರು ರೋಗಿಗಳು ಈ ಪ್ರಾಯೋಗಿಕ ಪರೀಕ್ಷೆಯ ಮೂಲಕ ಕುಷ್ಠರೋಗದಿಂದ ಮುಕ್ತರಾದರು. ಮುಂದೆ ಇಡೀ ದೇಶದಲ್ಲೇ ಕುಷ್ಠರೋಗವು ನಿರ್ಮೂಲನೆಯಾಗುವುದಕ್ಕೆ ಈ ಪ್ರಯೋಗದಿಂದ ಸಾಧ್ಯವಾಯಿತು. ಈ ಮಹತ್ಸಾಧನೆಗಾಗಿ ಭಾರತಸರ್ಕಾರವು ಡಾ. ನೀಲಕಂಠರಾಯರನ್ನು ಪದ್ಮಶ್ರೀ ಪ್ರಶಸ್ತಿ ನೀಡಿ ಪುರಸ್ಕರಿಸಿತಲ್ಲದೆ, ಜರ್ಮನಿಯ ಸರಕಾರವೂ ಅತ್ಯುನ್ನತ ಗೌರವದೊಡನೆ ಅವರನ್ನು ಸನ್ಮಾನಿಸಿತು.

ತಮ್ಮ ಅಣ್ಣ ನೀಲಕಂಠರಾಯರು ವಾರ್ಧಾದಲ್ಲಿದ್ದಾಗ ಗಿರಿಜಾ ಶಾಸ್ತ್ರಿಯವರು ತಮ್ಮ ಪತಿ ಮತ್ತು ಮಕ್ಕಳೊಡನೆ ಒಮ್ಮೆ ಅಲ್ಲಿಗೆ ಹೋಗಿದ್ದರು. ವಾರ್ಧಾದಲ್ಲೇ ಇದ್ದ ವಿನೋಬಾ ಭಾವೆಯವರ ಆಶ್ರಮಕ್ಕೂ ಭೇಟಿಕೊಟ್ಟು, ವಿನೋಬಾರವರನ್ನು ಮಾತನಾಡಿಸಿಕೊಂಡು ಬಂದಿದ್ದರು.

1974. ಚೈತನ್ಯದ ಚಿಲುಮೆಯಾಗಿ ಸದಾ ಲವಲವಿಕೆಯಿಂದಿರುವ ತಮ್ಮ ತಂಗಿ ಗಿರಿಜಾ ಕ್ಯಾನ್ಸರ್ ಖಾಯಿಲೆಗೆ ಗುರಿಯಾಗಿರಬಹುದೆಂಬ ವರ್ತಮಾನ ನೀಲಕಂಠರಾಯರಿಗೆ ತಿಳಿದೊಡನೆಯೇ ಅವರು ಹುಬ್ಬಳ್ಳಿಗೆ ಧಾವಿಸಿ ಬಂದರು. ಗಿರಿಜಾ ಬ್ರೆಸ್ಟ್ ಕ್ಯಾನ್ಸರ್ ನಿಂದ ಬಳಲುತ್ತಿರುವರೆಂದು ಖಚಿತಪಟ್ಟಮೇಲೆ ಹುಬ್ಬಳ್ಳಿಯ ಕೆ.ಎಂ.ಸಿ.ಆಸ್ಪತ್ರೆಯಲ್ಲಿ ಮೊದಲ ಶಸ್ತ್ರಚಿಕಿತ್ಸೆ ಮಾಡಲಾಯಿತು. ಆಮೇಲೆ ಹೆಚ್ಚಿನ ಚಿಕಿತ್ಸೆಗಾಗಿ ಗಿರಿಜಾರವರನ್ನು ನೀಲಕಂಠರಾಯರೇ ವೆಲ್ಲೂರಿಗೆ ಕರೆದೊಯ್ದರು. ಅಲ್ಲಿ ಪ್ರಖ್ಯಾತ ಸರ್ಜನ್ ಪದುಮಸಿಂಗ್ ಎಂಬ ವೈದ್ಯರು ಗಿರಿಜಾರವರಿಗೆ ಚೇತರಿಸಿಕೊಳ್ಳುವುದಕ್ಕೆ ಅಗತ್ಯವಾದ ರೇಡಿಯೇಶನ್ ಮತ್ತಿತರ ಚಿಕಿತ್ಸೆ ಕೊಡಿಸಿದರು. ಆ ಅವಧಿಯಲ್ಲಿ ನಾರಾಯಣ ಶಾಸ್ತ್ರಿಯವರು ಒಂದೂವರೆ ತಿಂಗಳು ರಜೆ ಹಾಕಿ ವೆಲ್ಲೂರಿನಲ್ಲಿದ್ದು ತಮ್ಮ ಪತ್ನಿಯ ಉಪಚಾರವನ್ನು ನೋಡಿಕೊಂಡಿದ್ದರು. ಮಾರಣಾಂತಿಕ ಖಾಯಿಲೆಯೆಂದೇ ಗುರುತಿಸಲಾಗುವ ಕ್ಯಾನ್ಸರ್



ಡಾ. ಎಂ. ಎಸ್. ನೀಲಕಂಠರಾವ್

ರೋಗವು ತನಗೆ ತಗುಲಿದೆಯೆಂದು ತಿಳಿದಾಗ ಗಿರಿಜಾ ಅಧೀರರಾದರು. ರೋಗಬಾಧೆಗೆ ಗುರಿಯಾದುದಕ್ಕೆ ಅವರಿಗೆ ದುಃಖವಾಗಲಿಲ್ಲ. ಈ ಅನಿರೀಕ್ಷಿತ ಆಪತ್ತು ಸೃಷ್ಟಿಸಿದ ಗೊಂದಲವೇ ಗಿರಿಜಾರವರನ್ನು ಇನ್ನಷ್ಟು ಕುಗ್ಗಿಸಿತ್ತು. ಇಂತಹುದೊಂದು ಆಪತ್ತು ಬಂದೆರಗುವುದೆಂದು ಶಾಸ್ತ್ರಿ ದಂಪತಿಗಳು ಯೋಚಿಸುವುದಕ್ಕೇನೂ ಕಾರಣವಿರಲಿಲ್ಲ. ಇನ್ನೂ ಚಿಕ್ಕ ವಯಸ್ಸಿನ ಮಕ್ಕಳಿರುವ ಸಂಸಾರ. ಸುಸಂಸ್ಕೃತವೂ ದೈವಭಕ್ತಿಯ ನೆಲೆಯೂ ಆದ ಕುಟುಂಬದ ಮೇಲೆ ಅನಾಮತ್ತಾಗಿ ಸಿಡಿಲು ಎರಗಿದಂತೆ ಬಂದೊದಗಿದ ಸಂಕಷ್ಟ. ಅನಂತನಿಗಿನ್ನೂ ಹದಿನೈದು ವರುಷ. ಸುವಾಸಿನಿ, ನಂದಕುಮಾರ ಇನ್ನೂ ಚಿಕ್ಕವರು. ಮಕ್ಕಳನ್ನು ಬಿಟ್ಟು ದೂರದ ಊರಿಗೆ ಚಿಕಿತ್ಸೆಗೆ ಹೋಗದೆ ವಿಧಿಯಿಲ್ಲ. ಅಪ್ಪ, ಅಮ್ಮ ತನ್ನನ್ನು ಬಿಟ್ಟು ಎಲ್ಲಿಗೋ ಪ್ರಯಾಣ ಹೋಗುತ್ತಿದ್ದಾರೆ ಎಂದು ಅಳುತ್ತಿದ್ದ ನಂದಕುಮಾರನನ್ನು ಸಮಾಧಾನಮಾಡುವುದೇ ಒಂದು ಕೆಲಸ. ಚಿಕಿತ್ಸೆ ಮುಗಿಯುವುದು ಎಷ್ಟು ದಿನವಾದೀತು ಎನ್ನುವ ಖಚಿತ ಮಾಹಿತಿಯೂ ಇಲ್ಲ.

ಶಾಸ್ತ್ರಿಗಳ ಮನೆಯ ಪಕ್ಕದಲ್ಲೇ ವೆಂಕಟರಾಮ್-ರಾಜೇಶ್ವರಿ ದಂಪತಿ ವಾಸವಾಗಿದ್ದರು. ಅವರ ಮಗಳು ಮಾಲಿನಿ ಸುವಾಸಿನಿಯ ವಾರಗೆಯವಳು. ಶಾಸ್ತ್ರಿಗಳು ತಮ್ಮ ಪತ್ನಿಯನ್ನು ವೈದ್ಯಕೀಯ ಚಿಕಿತ್ಸೆಗೆ ವೆಲ್ಲೂರಿಗೆ ಕರೆದುಕೊಂಡು ಹೋಗಿ ಹಿಂತಿರುಗುವವರೆಗೂ ಅವರ ಮಕ್ಕಳ ಯೋಗಕ್ಷೇಮವನ್ನು ತಾವು ವಹಿಸಿಕೊಳ್ಳುವುದಾಗಿ ವೆಂಕಟರಾಮ್ ಹೇಳಿದರು. ಕಾಲೊನಿಯಲ್ಲಿದ್ದ ಎಲ್ಲ ಕುಟುಂಬಗಳಂತೆಯೇ ವೆಂಕಟರಾಮ್ ದಂಪತಿಗಳ ಸಂಸಾರವೂ ಸಾಧಾರಣ ಮಧ್ಯಮವರ್ಗದ ಕುಟುಂಬ. ವೆಂಕಟರಾಮ್ ಮತ್ತು ರಾಜೇಶ್ವರಿಯವರಿಬ್ಬರೂ ಶಾಸ್ತ್ರಿ ದಂಪತಿಗೆ ಧೈರ್ಯ ಹೇಳಿ ಅವರ ಮಕ್ಕಳ ಪಾಲನೆಯ ಜವಾಬ್ದಾರಿ ಹೊತ್ತುಕೊಳ್ಳುವುದಾಗಿ ಭರವಸೆ ಕೊಟ್ಟಮೇಲೆ ಗಿರಿಜಾರವರಿಗೆ ಎಷ್ಟೋ ಧೈರ್ಯ ಬಂದಂತಾಯಿತು.

(ಮುಂದುವರೆಯುವುದು)

## ಅನಂತಪಥ ಓದುಗರ ಅಭಿಪ್ರಾಯ


ಕೆ. ಎಂ ಚಿಣ್ಣಪ್ಪನವರು ಹೃದಯ ಮುಟ್ಟಿ ಮಾಡಿದ ಅರಣ್ಯ ಸೇವೆಯ ಬಗ್ಗೆ ಓದಿದಾಗ, ಇಂಥ ನಿಷ್ಠೆಯುಳ್ಳ ಅಧಿಕಾರಿಗಳ ಬಗ್ಗೆ ತಿಳಿದುಕೊಳ್ಳುವುದೇ ಶ್ರೇಷ್ಠ ಕೆಲಸವೆನ್ನಿಸುತ್ತದೆ, ಲೇಖನದ ಶೀರ್ಷಿಕೆ ಅನ್ವರ್ಥ. ಚಿಣ್ಣಪ್ಪನವರಂತಹ ಪ್ರಾಮಾಣಿಕ ಕಳಕಳಿ, ಸೇವಾಶ್ರದ್ಧೆ ವಿರಳಾತಿ ವಿರಳ. ಇಂಥವರು ಕಳ್ಳಕಾಕರಿಗೆ ಹೇಗೆ ಪ್ರಿಯರಾದಾರು? ಈ ಸಮಾಜ ಅಂಥವರನ್ನು ಕಾಡಿದರೂ, ಅವರು ಅವರ ನೀತಿ, ನಿಯತ್ತನ್ನು ಎಂದಿಗೂ ಬಿಡರು ಎಂಬುದಕ್ಕೆ ಚಿಣ್ಣಪ್ಪನವರ ಬದುಕು ಜ್ವಲಂತ ನಿದರ್ಶನ.

**- ಎಲ್ ಗಿರಿಜಾ ರಾಜ್, ನಿವೃತ್ತ ಉಪನ್ಯಾಸಕಿ**

ಪರಿಸರ ರಕ್ಷಣೆಯ ಹಾದಿಯಲ್ಲಿ ಈ ಮಟ್ಟದ ವಿರೋಧವಿರುತ್ತದೆ ಎಂಬುದು ನಮಗೆ ಗೊತ್ತಿರುವುದೇ ಇಲ್ಲ. ಭೂಮಿಪುತ್ರನ ಪರಿಚಯವೊಂದು ಸಾಕಷ್ಟು ಮಾಹಿತಿಯನ್ನು ನೀಡಿದೆ.

**-ರಾಧಿಕಾ ಗುಜ್ಜರ್, ಬರಹಗಾರರು**

# ವೃತ್ತಿ ಶಿಕ್ಷಣ ಸಂಸ್ಥೆಗಳ ಸ್ಥಿತಿಗತಿ




**(ಕರಾಳಪತ್ರದಲ್ಲಿ ನಮೂದಾಗಿರುವ ಅಂಕಿ-ಅಂಶಗಳನ್ನು 1980ರಲ್ಲಿದ್ದಂತೆ ಪರಿಗಣಿಸಬೇಕಾಗಿ ಕೋರಿದೆ-ಸಂ.)**

ರಾಜ್ಯದ ಈ ವೃತ್ತಿ ಶಿಕ್ಷಣ ಸಂಸ್ಥೆಗಳ ಸ್ಥಿತಿ ಹೇಗಿದೆ? ಈ ಕುರಿತು ರಾಜ್ಯ ಸರ್ಕಾರ ಪ್ರಕಟಿಸಿರುವ ಶ್ವೇತ ಪತ್ರದಿಂದ ಹಿಡಿದು ರಾಜ್ಯದ ಅನೇಕ ವೃತ್ತ ಪತ್ರಿಕೆ, ವಾರ ಪತ್ರಿಕೆಗಳು ಸಚಿತ್ರ ಬರಹವನ್ನು ಪ್ರಕಟಿಸಿವೆ. ಅವುಗಳಲ್ಲಿ ಹೀಗಿದೆ: A) Karnataka has the largest number of Engineering Colleges for any State in India, 5% of the total population in the country and 20% of the Engineering colleges of India. B) In terms of facilities, only 4 Government and University Institutions, 8 aided colleges appear to be satisfactory. In the rest of the unaided private colleges, facilities are very much below standard.

ವೈದ್ಯಕೀಯ ಕಾಲೇಜುಗಳ ಬಗ್ಗೆ: It is estimated that the investment required in terms of building, hospital and equipment for a medical college with an intake of 100 is at least Rs. 13 crores and each such college and hospital will require a recurring expenditure of Rs. 150 lakhs per annum for maintenance.

With the large investment required for the establishment of Engineering or Medical College most of the private institutions have to obviously raise these funds by way of capitation fee or donations from or on behalf of the student's seeking admission. As a result, it is only the richer section of the people who can offer this. Merit and maintenance of the high standards have generally taken the second place and it has not been possible to promote social justice by way of helping the weaker sections of the society. (Pages 7, 8, 9 of White Paper on Professional Colleges)

ಸಾಮಾಜಿಕ ನ್ಯಾಯವನ್ನು ಬಲಿಕೊಡದಂತೆ ಪ್ರವೇಶದ ವ್ಯವಸ್ಥೆ ಮಾಡುವುದಾಗಿ ಚುನಾವಣಾ ಪ್ರಣಾಳಿಕೆಯಲ್ಲಿ ಆಶ್ವಾಸನೆ, ಅರ್ಹತೆ, ಉತ್ತಮ ಮಟ್ಟದ ವ್ಯವಸ್ಥೆ, ನಿರ್ವಹಣೆಗಳನ್ನು ಪಕ್ಕಕ್ಕೆ ತಳ್ಳಿ, ಹಣಕ್ಕೆ ಪ್ರಾಧಾನ್ಯತೆ, ಶ್ರೀಮಂತರಿಗೇ ಉಚ್ಚ ಶಿಕ್ಷಣದ ಸುಲಭ ಸೌಲಭ್ಯವೊದಗಿಸುವ ಕ್ಯಾಪಿಟೇಶನ್ ಶುಲ್ಕದಿಂದ ಸಾಮಾಜಿಕ ನ್ಯಾಯಕ್ಕೆ ಸಂಚಕಾರ, ಹಿಂದುಳಿದ ದಲಿತ ವರ್ಗಗಳು ಈ ಸೌಲಭ್ಯ ದಿಂದ ಸಹಜ ವಂಚಿತ ಎಂದು ತಾನೇ ಪ್ರಕಟಿಸಿದ ಶ್ವೇತಪತ್ರದಲ್ಲಿ ಉದ್ಗಾರ ಮಾಡುತ್ತಾ ಸೀಟು ಶುಲ್ಕದ ಪಾಪದ ಹಾದಿ ಹಿಡಿದಿರುವ ಬುದ್ಧಿವಂತ, ಸಾಮಾಜಿಕ ಕಳಕಳಿಯುಳ್ಳ, ಹಿಂದುಳಿದ ದಲಿತರಿಗೆ ಸಾಮಾಜಿಕ ನ್ಯಾಯ ಒದಗಿಸಲು ಕಟಿಬದ್ಧರಾಗಿರುವರೆಂದು ಹೇಳಿಕೊಳ್ಳುವ ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗಡೆಯವರ ನುಡಿನಡೆಗಳು ಇತ್ತೀಚಿನ ಚರಿತ್ರೆಯ ವಿಪರ್ಯಾಸ.

1983ರಲ್ಲಿ ಪ್ರಕಟವಾದ ಶ್ವೇತಪತ್ರದ ನುಡಿಗಳು ಅಂದಿಗಿಂತಲೂ ಇಂದು ಹೆಚ್ಚು ಪ್ರಸ್ತುತ. ಸೂಕ್ತ ಸೌಲಭ್ಯ ಮತ್ತು ಪಾಠ ಪ್ರವಚನ-ಪ್ರಯೋಗಾಲಯಗಳ ವ್ಯವಸ್ಥೆಯಿಲ್ಲದೆಯಿರುವುದರಿಂದ ಭಾರತೀಯ ವೈದ್ಯಕೀಯ ಮಂಡಳಿ (Medical Council of India) ರಾಜ್ಯದ 9 ಕಾಲೇಜುಗಳಿಗೆ ಮನ್ನಣೆಯಿತ್ತಿಲ್ಲ.

ಉದಾ: ಬೆಂಗಳೂರಿನ ಕೆಂಪೇಗೌಡ ವೈದ್ಯಕೀಯ ಮಹಾ ವಿದ್ಯಾಲಯದ ನಿರೀಕ್ಷಣೆಗೆ ಬಂದ ಭಾರತೀಯ ವೈದ್ಯಕೀಯ ಮಂಡಳಿಯ ನಿಯೋಗ ಅಲ್ಲಿನ ಕೊರತೆಗಳನ್ನು ತನ್ನ ವರದಿಯಲ್ಲಿ ದಾಖಲಿಸಿ ಕೊನೆಯಲ್ಲಿ ಹೀಗೆ ಆರೋಪಿಸಿದೆ: "The Institution does not have adequate facilities for undergraduate training of 150 annual admissions and requires to be re-inspected after rectification of its short comings. (Page 9 MCI Delegation Report)

- ◆ ರಾಜ್ಯದ ಅನೇಕ ವೈದ್ಯಕೀಯ ಕಾಲೇಜುಗಳು, ಪ್ರಾಥಮಿಕ ಶಿಕ್ಷಣ ಸೌಲಭ್ಯಗಳನ್ನು ಹೊಂದಿಲ್ಲದೇ ವಿದ್ಯಾರ್ಥಿಗಳು ಪರದಾಡಬೇಕಾದ ಸ್ಥಿತಿ ಒದಗಿದೆ.
- ◆ ಮೈಸೂರಿನ ಜೆ. ಎಸ್. ಎಸ್. ಮೆಡಿಕಲ್ ಕಾಲೇಜು ವಿದ್ಯಾರ್ಥಿಗಳು ಸರಕಾರಿ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳ ಜೊತೆಯಲ್ಲಿ ಕ್ಲಿನಿಕಲ್ ಸೌಲಭ್ಯಕ್ಕಾಗಿ ಕೆ. ಆರ್. ಆಸ್ಪತ್ರೆಯಲ್ಲಿ ಕಿತ್ತಾಡಬೇಕಾಯಿತು. ಇದು ಮುಂದುವರೆದರೆ ಅಲ್ಲಿನ ರೋಗಿಗಳ ಗತಿಯೇನು ಎಂಬುದು ಒಂದು ಪ್ರಶ್ನೆಯಾದರೆ ಈ ವಿದ್ಯಾರ್ಥಿಗಳ ಪ್ರಾಯೋಗಿಕ ಶಿಕ್ಷಣದ ಗತಿ, ನಂತರ ಪರಿಣಾಮ ಊಹಿಸಲೂ ಭಯವಾಗುತ್ತದೆ.
- ◆ ಬಿಜಾಪುರದಲ್ಲಿರುವ ಅಲ್ ಅಮೀನ್ ಮೆಡಿಕಲ್ ಕಾಲೇಜು ಮತ್ತು ಬಿ. ಎಲ್. ಡಿ. ಅಸೋಸಿಯೇಷನ್ ಕಾಲೇಜು ಎರಡಕ್ಕೂ ಅಲ್ಲಿನ ಜಿಲ್ಲಾ ಆಸ್ಪತ್ರೆಯೇ ಪ್ರಯೋಗ ಮಂದಿರವಾಗಿದೆ.
- ◆ ಬೆಳಗಾವಿಯ ಜವಹರಲಾಲ್ ನೆಹರು ಮೆಡಿಕಲ್ ಕಾಲೇಜಿಗೆ ಸ್ವಂತ ಆಸ್ಪತ್ರೆ ಕಟ್ಟಡ ನಿರ್ಮಾಣವಾದದ್ದು ತೀರ ಇತ್ತೀಚೆಗೆ, ಕಾಲೇಜ್ ಶುರುವಾಗಿ 25 ವರ್ಷಗಳ ನಂತರ.
- ◆ ಬೆಂಗಳೂರಿನ ಕೆಂಪೇಗೌಡ ಮೆಡಿಕಲ್ ಕಾಲೇಜಿನಲ್ಲಿರುವ ಒಂದೇ ಒಂದು ಕೆಮಿಸ್ಟ್ರಿ ಪ್ರಯೋಗಾಲಯವನ್ನು ಎಂ. ಬಿ. ಬಿ. ಎಸ್, ಬಿ. ಫಾರ್ಮಾ, ಡಿ. ಫಾರ್ಮಾ ಹಾಗೂ ವಿ. ವಿ. ಪುರಂ ವಿಜ್ಞಾನ ಕಾಲೇಜುಗಳವರು ಉಪಯೋಗಿಸುತ್ತಿರುವುದು ನಿಜಕ್ಕೂ ಪವಾಡ ಸದೃಶವಾದ ಸಂಗತಿ.
- ◆ ರಾಜ್ಯಾದ್ಯಂತ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕಾಲೇಜುಗಳು ಜಿಂಕ್ ಶೀಟ್ ಷೆಡ್ಡುಗಳಲ್ಲಿ ಆರಂಭಿಸಲ್ಪಡುತ್ತಿರುವುದೂ ವರ್ಷಗಟ್ಟಲೇ ಯಾವುದೇ ರೀತಿಯ ಪ್ರಯೋಗಾಲಯ-ಆಸ್ಪತ್ರೆ ಸೌಲಭ್ಯ, ಗ್ರಂಥಾಲಯ, ತರಗತಿ ಕೋಣೆಗಳನ್ನು ವ್ಯವಸ್ಥಿತವಾಗಿ ಹೊಂದದೇ ಇರುವುದು ಸಹಜವಾಗಿ ಬಿಟ್ಟಿದೆ. ಈ ರೀತಿಯ ಸ್ಥಿತಿಯಿಂದಾಗಿ ಪರಿಣತಿ ಪಡೆದು ಹೊರಬರಬೇಕಾದ ವಿದ್ಯಾರ್ಥಿ ಹಂಡ ಬಂಡ ಜ್ಞಾನ ಪಡೆದು ಹೊರಬರುತ್ತಿದ್ದಾನೆ. ಆತ ಸ್ವಯಂ ಉದ್ಯೋಗ ಹೊಂದಲೂ ಪರಿಣತಿಯಿಲ್ಲದೆ, ಉದ್ದಿಮೆಗಳ ಅರ್ಹತೆಯ ಆವಶ್ಯಕತೆಗಳಿಗೆ ಏರಲಾರದವನಾಗಿ ಸರಕಾರಿ ಕೆಲಸವೂ ಸಿಗದೆ ನಿರುದ್ಯೋಗಿಯಾಗಿ ಹತಾಶ ಮನುಷ್ಯನಾಗುತ್ತಿದ್ದಾನೆ. ಇಂತಹ ಭಗ್ನ ಮನಸ್ಸಿನ ಅರೆಬರೆ ಶಿಕ್ಷಿತ ಯುವಕರ ತಂಡ ಅಸ್ವಸ್ಥ ಸಮಾಜವನ್ನು ನಿರ್ಮಿಸುತ್ತಿದೆ.

ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ನಿನ ಅಧ್ಯಕ್ಷರಾದ ಡಾ|| ವಿ. ಪರಮೇಶ್ವರರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ "New Medical colleges are opened with utter disregard of the existing Medical manpower and utter lack of suitable and adequate facilities for undergraduate training. The policy makers and proponents of new Medical colleges defend themselves on the basis of the Mudaliar committee report, which recommends one Medical college for every 50 lakhs of people but in reality not only there are colleges far in excess of this formula but several colleges also admit 150 to 200 candidates a year, as against the Mudaliar Committee recommendation of 100 seats per year. The result is large number of sub- standard doctors have been churned out by these colleges". (Presidential address, All India Conference, 61st session IMA, New Delhi)

ರಾಜ್ಯ ಸರ್ಕಾರದ ನೀತಿಗೆಟ್ಟ ಆಡಳಿತದಿಂದಾಗಿ ವೃತ್ತಿ ಶಿಕ್ಷಣದ ವ್ಯಾಪಾರೀಕರಣವಾಗಿದೆ. ಕ್ಯಾಪಿಟೇಶನ್ ಪಿಡುಗಿನಿಂದ ಪ್ರತಿಭೆಗೆ ಸಿಗಬೇಕಾದ ಪ್ರಾಶಸ್ತ್ಯ ಹಣಕ್ಕೆ, ವಶೀಲಿಬಾಜಿತನಕ್ಕೆ ದೊರಕಿದೆ. ಶಿಕ್ಷಣ ಸಂಸ್ಥೆಗಳು ಹಣ ಮಾಡುವ, ರಾಜಕೀಯ ಹಿತಾಸಕ್ತಿ ಬೆಳೆಸುವ ತಾಣವಾಗಿದೆ. ಶಿಕ್ಷಣದೇಳಿಗೆಯ ಮೂಲಭೂತ ವಿಚಾರವಿಲ್ಲದೆಯಿರುವುದರಿಂದ ಅಧ್ಯಾಪಕರ ಕೊರತೆ, ಅವ್ಯವಸ್ಥಿತ ಪ್ರಯೋಗ ಶಾಲೆಗಳು, ಆಸ್ಪತ್ರೆ, ಸೌಲಭ್ಯವಿಲ್ಲದೆಯಿರುವುದು, ಸರಿಯಾದ ಕಟ್ಟಡದ ಕೊರತೆ. ಪಾಠಪ್ರವಚನಗಳು ನಡೆಯದೇಯಿರುವುದು, ಪರೀಕ್ಷೆಗಳಲ್ಲಿ ಅವ್ಯವಹಾರ, ಭ್ರಷ್ಟಗೊಂಡಿರುವ ಮೌಲ್ಯ ಮಾಪನ ಇಡೀ ವೃತ್ತಿ ಶಿಕ್ಷಣವನ್ನು ಡಿಗ್ರಿಗಳನ್ನು ಮಾರುವ ಕಾಳಸಂತೆಯನ್ನಾಗಿಸಿದೆ. ಇದರ ಪರಿಣಾಮ ಸದ್ಯದ ಮತ್ತು ಭವಿಷ್ಯದ ರಾಜ್ಯದ ಆರ್ಥಿಕ -ಸಾಮಾಜಿಕ-ಶೈಕ್ಷಣಿಕ ಸ್ಥಿತಿಯ ಬಗ್ಗೆ ಊಹಿಸಲೂ ಹೆದರಿಕೆಯಾಗುವಷ್ಟು ಘೋರ.

(ಮುಂದುವರಿಯುವುದು)

# ಹೃದಯದಲ್ಲಿ ನೆಲೆಸಿರುವ ಅಜಾತಶತ್ರು

ನಾನು ಕಂಡಂತೆ



ಅನಂತಕುಮಾರ್



ಸಂಜಯ್ ಉಪಾಧ್ಯಾಯ

ಬಿ.ಜೆ.ಪಿ.ಮುಖಂಡರು, ಮುಂಬೈ

ಮುಂಬೈಯ ವಿಲೇಪಾರ್ಲೆ ನಿವಾಸಿಯಾದ ನಾನು ಮೂಲತಃ ಸಂಘ ಪರಿವಾರದ ಶಿಕ್ಷಕನಾಗಿದ್ದು ಚಿಕ್ಕಂದಿನಿಂದಲೇ ಭಾರತೀಯ ಜನತಾ ಪಕ್ಷದ ಕೆಲಸ ಮಾಡುತ್ತಿದ್ದೆ. 2014ರ ಮೇ ತಿಂಗಳಲ್ಲಿ ಬಿಜೆಪಿ-ಶಿವಸೇನಾ ಮಧ್ಯೆ ವಿಧಾನಸಭಾ ಸೀಟು ಹೊಂದಾಣಿಕೆಯಾಗದ ಕಾರಣ ಎರಡು ಪಕ್ಷಗಳ ನಡುವಣ ಸುದೀರ್ಘ ಸಂಬಂಧ ಮುರಿದು ಬಿತ್ತು. ಇದರಿಂದಾಗಿ ಮಹಾರಾಷ್ಟ್ರದಲ್ಲಿ ಪಕ್ಷವು ಸಂಕಟ ಎದುರಿಸುವಂತಾಯಿತು. ಬಹಳಷ್ಟು ಕಡೆಗಳಲ್ಲಿ ಪಕ್ಷದ ಸಂಘಟನೆಯೂ ಆಗಿರಲಿಲ್ಲ. ಇಂತಹ ಸ್ಥಿತಿಯಲ್ಲಿ ಮಹಾರಾಷ್ಟ್ರ ವಿಧಾನಸಭೆಯ ಒಟ್ಟು 280 ಸ್ಥಾನಗಳಲ್ಲಿ ಚುನಾವಣೆ ಎದುರಿಸುವುದು ಕಷ್ಟವಿತ್ತು. ಈ ಪೈಕಿ, ಕನಿಷ್ಠ 75 ಸ್ಥಾನಗಳಲ್ಲಿ ಬಿಜೆಪಿ ಗೆಲುವು ಸಾಧಿಸುವಂತೆ ಪ್ರಯತ್ನಿಸಲು ಶ್ರೀ ಅನಂತಕುಮಾರರಿಗೆ ಜವಾಬ್ದಾರಿ ನೀಡಲಾಗಿತ್ತು. ನಾನೂ ಸಹ ಆಗ ಸ್ಪರ್ಧಾಕಾಂಕ್ಷಿಯಾಗಿದ್ದೆ. ಆದರೆ ನನಗೆ ಟಿಕೆಟ್ ಸಿಗಲಿಲ್ಲ. ಆದರೂ ಶ್ರೀ ಅನಂತಕುಮಾರರೊಂದಿಗೆ ಪ್ರವಾಸ ಮಾಡಿ ಚುನಾವಣಾ ಕೆಲಸ ನಿರ್ವಹಿಸುವಂತೆ ನನಗೆ ಸೂಚಿಸಲಾಗಿತ್ತು.

ಹಿರಿಯ ನಾಯಕ ಆಶೀಷ್ ಶೇಲಾರ್ ಮೂಲಕ ನನಗೆ ಅನಂತಕುಮಾರರ ಪರಿಚಯವಾಯಿತು. ಮೊದಲ ಪರಿಚಯದಲ್ಲೇ ನನ್ನ ಪೂರ್ವಾಪರಗಳನ್ನು ವಿಚಾರಿಸಿಕೊಂಡು ಮರುದಿನ ಬೆಳಿಗ್ಗೆ ನೇರವಾಗಿ ನಮ್ಮ ಮನೆಗೇ ಬಂದರು. ಅವರು ಚೆಂಬೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಸ್ಟಡೀಜ್ ನಲ್ಲಿ ಓದುತ್ತಿದ್ದ ತಮ್ಮ ಮಗಳನ್ನು ಮಧ್ಯಾಹ್ನ ನಾಲ್ಕು ಗಂಟೆಗೆ ಭೇಟಿಯಾಗುವ ಕಾರ್ಯಕ್ರಮವಿತ್ತು. ಹೀಗಾಗಿ, ಮೊದಲು ಚೆಂಬೂರಿನ ಪ್ರಾಂತೀಯ ಕಚೇರಿಯಲ್ಲಿ ಸ್ಥಳೀಯ ಕಾರ್ಯಕರ್ತರನ್ನು ಭೇಟಿಯಾಗಿ ಅವರ ಜೊತೆ ಪಕ್ಷದ ಬೆಳವಣಿಗೆಯ ಕುರಿತು ಸಂವಾದ ನಡೆಸಿದರು. ನಂತರ, ನಾವು ಇನ್‌ಸ್ಟಿಟ್ಯೂಟ್ ಗೆ ತೆರಳಿದೆವು. ಅಲ್ಲಿ ಅವರ ಮಗಳನ್ನು ದೂರವಾಣಿ ಮೂಲಕ ಸಂಪರ್ಕಿಸುವುದು ತತ್ ಕ್ಷಣ ಸಾಧ್ಯವಾಗದೆ ಸ್ವಲ್ಪ ಹೊತ್ತು ಕ್ಯಾಂಟೀನಿನಲ್ಲಿ ಕುಳಿತುಕೊಂಡೆವು. ಇಂಥ ಹಿರಿಯ ನಾಯಕರನ್ನು ದೊಡ್ಡ ಹೋಟೆಲಿಗೆ ಕರೆದೊಯ್ಯಬೇಕಿತ್ತು. ಆದರೆ, ಸಾಮಾನ್ಯ ಕ್ಯಾಂಟೀನ್ ಬಿಲ್ ಕೊಡಲೂ ನನ್ನಲ್ಲಿ ಹಣವೇ ಇರಲಿಲ್ಲ. ಅವರು ನನ್ನ ಬಗ್ಗೆ ಏನು ಯೋಚಿಸಬಹುದು? ಎಂಬ ಆತಂಕದಲ್ಲಿದ್ದೆ. ಅವರು ವಡಾ ಹಾಗೂ ಚಹಾ ಆರ್ಡರ್ ಮಾಡಿದರು. ಆದರೆ ಅಷ್ಟರಲ್ಲಿ ಸಂಸ್ಥೆಯ ರಿಜಿಸ್ಟ್ರಾರ್‌ಗೆ ಅನಂತಕುಮಾರ್ ಬಂದ ಮಾಹಿತಿ ತಲುಪಿತ್ತು. ಅದೇ ಹೊತ್ತಿಗೆ ಅನಂತಕುಮಾರರ ಮಗಳೂ ಸಹ ಅಲ್ಲಿಗೆ ಬಂದರು. ಅನಂತಕುಮಾರ್ ಬಿಲ್ ಕೊಡಲು ಹೋದಾಗ, ರಿಜಿಸ್ಟ್ರಾರ್ ತಡೆದು "ಬಿಲ್ ಕೊಡುವ ಅಗತ್ಯವಿಲ್ಲ" ಎಂದಾಗ ನಾನು ನಿಟ್ಟುಸಿರುಬಿಟ್ಟೆ. ಅವರು ಮಗಳೊಂದಿಗೆ ಮಾತನಾಡಿ ಮರಳಿ ಬಂದರು. ವಾಹನದಲ್ಲಿ ಕುಳಿತಾಗ ನಾನೆಂದೆ "ಅನಂತ್ ಜೀ, ನನ್ನಲ್ಲಿ ಹಣವಿರಲಿಲ್ಲ. ಇಂದು ನಾನು ಬಹುದೊಡ್ಡ ಸಂಕಷ್ಟದಲ್ಲಿದ್ದೆ. ಹಣ ಕೊಡಲು ನನ್ನ ಜೊತೆಯಲ್ಲಿ ಬಂದಿದ್ದ ಮಿತ್ರನನ್ನು ಕೇಳಲು ಹೋದರೆ ತಾವು ತಡೆದಿರಿ" ಎಂದೆ. ಆಗ ಅನಂತಕುಮಾರರು "ನೋಡಿ, ಈ ಅನಂತಕುಮಾರ್ ಕೂಡ ಹಣ ಇಡುವುದಿಲ್ಲ. ದೇಶ-ವಿದೇಶಗಳನ್ನು ಸುತ್ತುವಾಗಲೂ ಕಿಸೆಯಲ್ಲಿ ಹಣ ಇಟ್ಟುಕೊಳ್ಳುವ ರೂಢಿ ನನ್ನಲ್ಲಿಲ್ಲ" ಎಂದಿದ್ದರು.

ಮರುದಿನ ಬೆಳಿಗ್ಗೆ ಅನಂತಕುಮಾರರು ನನ್ನ ಮನೆಗೆ ಬಂದರು. ನಾಲ್ಕು ಅಂತಸ್ತಿನ ಕಟ್ಟಡದಲ್ಲಿದ್ದ ಮನೆಗೆ ಲಿಫ್ಟ್ ಸೌಲಭ್ಯ ಇರಲಿಲ್ಲವಾಗಿ, ಮೆಟ್ಟಿಲುಗಳನ್ನು ಹತ್ತಿಯೇ ಮೇಲೆ ಬಂದರು. ಅವರಿಗೆ ನನ್ನ ಪತ್ನಿ ನೀಲಂರನ್ನು ಪರಿಚಯಿಸಿದೆ. ನೀಲಂ ಕೋಪದಲ್ಲಿದ್ದಳು. ಒಂದು ರೀತಿಯಲ್ಲಿ ಅವಳು ಅನಂತಕುಮಾರರೊಂದಿಗೆ ಜಗಳವೇ ಆಡಿದಳು. "ಸಂಜಯ್‌ನಲ್ಲಿ ಯಾವುದು ಕಮ್ಮಿ ಇದೆ? ಓದಿದ್ದಾರೆ, ಬರೆದಿದ್ದಾರೆ, ಗುಣವೂ ಚೆನ್ನಾಗಿದೆ, ಪ್ರಾಮಾಣಿಕತನದ ಕೊರತೆ ಇದೆಯೇ? ಎಷ್ಟೇ ಕಷ್ಟದ ಕೆಲಸವಿದ್ದರೂ ಅದನ್ನು ಪೂರ್ಣಗೊಳಿಸುತ್ತಾರೆ. ಇಷ್ಟಾದರೂ ಪಕ್ಷದಿಂದ ಅವರಿಗೆ ಟಿಕೆಟ್ ಕೊಡಲಿಲ್ಲವೇಕೆ?" ಎಂದು ಪ್ರಶ್ನಿಸಿದಳು. ಆಗ, ಅನಂತಕುಮಾರರು ಅತ್ಯಂತ ಸಮಾಧಾನದಿಂದ ಪ್ರತಿಕ್ರಿಯಿಸಿದರು, "ನೋಡಿ, ಯಾರಿಗೆ ಇಷ್ಟರವರೆಗೆ ಗುರು ಇರಲಿಲ್ಲವೋ, ಅವರಿಗೆ ಈಗ ಗುರು ಸಿಕ್ಕಿದ್ದಾನೆ. ನನ್ನ ಮಾತನ್ನು ಬರೆದುಕೊಳ್ಳಿ, One day your Husband will become a big Leader of BJP. And note down my words." ಇಷ್ಟು ಹೇಳಿದ ಅನಂತಕುಮಾರರು "You are my sister, don't worry" ಎಂದರು. ಮುಂದುವರಿದು, "ಸಂಯಮ ಇರಬೇಕು. ಸಂಜಯನಲ್ಲಿ ಉತ್ತಮ ಗುಣವಿದೆ. ಇಂತಹ ಉತ್ತಮ ವ್ಯಕ್ತಿಗೆ ಬೆಲೆ ಇದೆ. ಅವರಿಗೆ ಟಿಕೆಟ್ ಸಿಗೋದು, ಬಿಡೋದು ಅದು ರಾಜಕೀಯ ವಿದ್ಯಮಾನ. ಆದರೆ, ಸಂಜಯ್‌ರಿಗೆ ರಾಜಕೀಯವಾಗಿ ಹಾನಿಯಾಗದು. ಅವರ ಚಿಂತೆ ಮಾಡಬೇಡಿ" ಎಂದರು. ನಾವು ಮನೆಯಿಂದ ಹೊರಟಾಗ "ನೋಡಿ, ನನಗೆ ವಿಶ್ರಾಂತಿ ಪಡೆಯಲು ಬಿಡಬಾರದು. ನನಗೆ ವಿಶ್ರಾಂತಿ ಬೇಕಾದರೆ ನಾನು ವಾಹನದಲ್ಲೇ ತೆಗೆದುಕೊಳ್ಳುವೆ" ಎಂದು ಹೇಳಿ ನಮ್ಮಲ್ಲಿ ಅಚ್ಚರಿ ಮೂಡಿಸಿದರು. ಚುನಾವಣೆ ಮುಗಿಯುವವರೆಗೂ ಅವರು ಇದನ್ನೇ ಪಾಲಿಸಿದರು. ಅವರು ವಾಹನದಲ್ಲೇ ನಿದ್ದೆ ಮಾಡುತ್ತಿದ್ದರು. ಇಲ್ಲವೇ, ಎಚ್ಚರಿದ್ದೇ ಪ್ರಯಾಣದ ಆನಂದವನ್ನು ಪಡೆಯುತ್ತಿದ್ದರು.

ಅವರು ವಾಹನದ ಚಾಲಕನ ಯೋಗಕ್ಷೇಮವನ್ನೂ ಕೇಳುತ್ತಿದ್ದರು. ಒಂದು ದಿನ ಆತ ವರ್ತಿಸಿದ ರೀತಿ ಸರಿಯಿಲ್ಲವೆಂದು ಅನಂತಕುಮಾರ್ ನಯವಾಗಿಯೇ ಎಚ್ಚರಿಸಿದ್ದರು. ಇದು ವಾಹನದ ಮಾಲೀಕನಿಗೆ ಗೊತ್ತಾಗಿ, ಅವನನ್ನು ಕೆಲಸದಿಂದ ತೆಗೆದು ಹಾಕಿದ್ದ. ಮರುದಿನ ಬೆಳಿಗ್ಗೆ ಬೇರೆಯವನನ್ನು ಕಂಡ ಅನಂತಕುಮಾರ್ 'ನಿನ್ನೆಯ ಚಾಲಕ ಎಲ್ಲಿ?' ಎಂದು ಕೇಳಿದರು. ಅವನನ್ನು ಕೆಲಸದಿಂದ ವಜಾ ಮಾಡಿದ ವಿಷಯ ತಿಳಿಯಿತು. ಆ ಚಾಲಕನೇ ಬರಬೇಕು ಎಂದು ಅನಂತಕುಮಾರರು ವಾಹನದ ಮಾಲೀಕನಿಗೆ ಫೋನ್‌ಮಾಡಿದರು. ಅದೇ ಚಾಲಕ ಬರುವ ತನಕ ತಾವು ವಾಹನದೊಳಗೆ ಕೂಡುವುದಿಲ್ಲ ಎಂದರು. ತಕ್ಷಣವೇ ಕಾರಿನ ಮಾಲಿಕ ಅದೇ ಚಾಲಕನನ್ನು ಕಳುಹಿಸಿದ್ದ. ಹೀಗೆ, ಒಬ್ಬ ಸಾಮಾನ್ಯ ವ್ಯಕ್ತಿಗಾಗಿಯೂ ಅನಂತಕುಮಾರರು ಚಿಂತಿಸುತ್ತಿದ್ದರು. ತಮ್ಮ ಕಾರಣದಿಂದಾಗಿ ಇತರರು ಹಾನಿ ಅನುಭವಿಸುವಂತಾಗಬಾರದು ಎಂಬುದು ಅವರ ಸದುದ್ದೇಶವಾಗಿತ್ತು.

ಅನಂತಕುಮಾರರಿಗೆ ವಡಾ ಪಾವ್ ಅಂದರೆ ಇಷ್ಟವಿತ್ತು. "ನಾನು ಕೆಲಸವನ್ನೇನೋ ಮಾಡುತ್ತೇನೆ. ಆದರೆ, ಪ್ರತಿ ದಿನ ಸಂಜೆ 5ಕ್ಕೆ ನನಗೆ ವಡಾಪಾವ್ ಬೇಕು" ಎಂದು ನಿಸ್ಸಂಕೋಚವಾಗಿ ಕೇಳುತ್ತಿದ್ದರು. ಮುಂಬಯಿಯಲ್ಲಿ ಅವರು ಎಲ್ಲಿಯೇ ಪ್ರವಾಸ ಮಾಡುತ್ತಿರಲಿ, ಸಂಜೆಯ ಹೊತ್ತಲ್ಲಿ ಅವರಿಗೆ ವಡಾಪಾವ್ ಸಿಗುವ ಹಾಗೆ ನಾನು ವ್ಯವಸ್ಥೆ ಮಾಡುತ್ತಿದ್ದೆ. ಚುನಾವಣೆಯ ನಂತರವೂ ಅವರು ಮುಂಬೈಗೆ ಬಂದಾಗಲೆಲ್ಲ, ಅವರ ಇಷ್ಟದಂತೆ ವಡಾಪಾವ್ ತರಿಸುವ ವ್ಯವಸ್ಥೆ ಮಾಡುತ್ತಿದ್ದೆ. ಅವರು "ವಿಮಾನದಲ್ಲಿ ಕೊಡುವ ಆಹಾರವು ಬಹು ಮೊದಲೇ ತಯಾರಿಸಿದ್ದಿರುತ್ತದೆ. ಅದಕ್ಕಾಗಿ ನಾನು ತಿನ್ನುವುದಿಲ್ಲ. ಪಂಚತಾರಾ ಹೋಟೆಲ್ ಊಟವೂ ನನಗೆ ಸೇರದು. ಹೀಗಾಗಿ, ನನಗೆ ಮನೆಯ ಊಟ ಅಥವಾ ಸಾಧಾರಣ ಹೋಟೆಲ್ಲಿನಲ್ಲಿ ಸಿಗುವ ದಾಲ್ ಸಾಂಬಾರು ಹೆಚ್ಚು ಇಷ್ಟ" ಎನ್ನುತ್ತಿದ್ದರು.

ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯಲ್ಲಿ ಕನಿಷ್ಠ 75 ಸ್ಥಾನಗಳನ್ನು ಗೆಲ್ಲುವ ಗುರಿಯನ್ನು ಅನಂತಕುಮಾರರಿಗೆ ನೀಡಲಾಗಿತ್ತು. ಅವರು ಯಾವ ಯಾವ ಸ್ಥಾನಗಳನ್ನು ಗೆಲ್ಲಬಹುದು ಎಂದು ಊಹಿಸಿದ್ದರೋ ಆ ಎಲ್ಲ ಸ್ಥಾನಗಳಲ್ಲೂ ಬಿಜೆಪಿ ಗೆದ್ದಿತ್ತು. ಇದು, ಅನಂತಕುಮಾರರ ಯೋಗವೋ ಸಂಯೋಗವೋ ಅಥವಾ ಅನಂತಕುಮಾರರ ಅನುಭವಕೌಶಲ ಎನ್ನಬೇಕೋ? ಅವರೇ ಹೇಳಬೇಕು.

ಗೋರೆಗಾಂವ್ ಕ್ಷೇತ್ರದಲ್ಲಿ ಶಿವಸೇನೆಯ ಪ್ರಭಾವೀ ಮಂತ್ರಿ ಸುಭಾಷ್ ದೇಸಾಯಿ ಸ್ಪರ್ಧಿಸಿದ್ದರು. ಅವರ ವಿರುದ್ಧ ಬಿಜೆಪಿಯಿಂದ ವಿದ್ಯಾ ಠಾಕೂರ್ ಸ್ಪರ್ಧಿಸಿದ್ದರು. ವಿದ್ಯಾ ಠಾಕೂರ್ ಅವರನ್ನು ಬಲಿ ಕೊಡಲಾಗುತ್ತಿದೆ ಎಂದೇ ವಿಶ್ಲೇಷಣೆಗಳು ಬರುತ್ತಿದ್ದವು. ಆದರೆ, ವಿದ್ಯಾ ಠಾಕೂರ್ ಗೆದ್ದಿದ್ದರು. ಇದು ಅನಂತಕುಮಾರರ ರಾಜಕೀಯ ಜಾಣ್ಮೆಗೆ ಸಾಕ್ಷಿ.

ಅನಂತಕುಮಾರರಿಗೆ ತಾವು ಮಂತ್ರಿಯಾಗಿರುವುದಕ್ಕಿಂತಲೂ ಬಿಜೆಪಿಯನ್ನು ಬೆಳೆಸುವುದರಲ್ಲೇ ಹೆಚ್ಚು ಆಸಕ್ತಿ. ಒಂದು ವೇಳೆ ನನ್ನನ್ನು ಪಕ್ಷದ ರಾಷ್ಟ್ರೀಯ ಅಧ್ಯಕ್ಷನನ್ನಾಗಿ ಆಯ್ಕೆ ಮಾಡಲಾಗಿದೆ ಎಂದು ಹೇಳಿದರೆ ನಾನು ಮಂತ್ರಿಗಿರಿಗೆ ರಾಜೀನಾಮೆ ನೀಡುವೆ ಎನ್ನುತ್ತಿದ್ದರು. ಜನ ಸಾಮಾನ್ಯರ ಮಧ್ಯೆ ಇರುವುದನ್ನು ಅವರು ಹೆಚ್ಚು ಇಷ್ಟಪಡುತ್ತಿದ್ದರು. ಕೇಂದ್ರಮಂತ್ರಿಯಾದವರೊಂದಿಗೆ ಮಾತನಾಡುವುದನ್ನು ಬಿಡಿ; ಅವರನ್ನು ಕಾಣುವುದೂ ಸಹ ದುಸ್ತರ. ಆದರೆ, ಅನಂತಕುಮಾರರು ಇದಕ್ಕೆ ಹೊರತಾಗಿದ್ದರು. ಅವರು ಬಹಳಷ್ಟು ರಾಜ್ಯಗಳ ಉಸ್ತುವಾರಿ ವಹಿಸಿದ್ದರು. ಅವರು ತಮ್ಮದೇ ರಾಜ್ಯಕ್ಕಿಂತ ಹೆಚ್ಚಾಗಿ, ಎಲ್ಲ ರಾಜ್ಯದ ಜನರೊಂದಿಗೆ ಆತ್ಮೀಯವಾಗಿರಲು

ಪುಟ 6 ರಲ್ಲಿ ಮುಂದುವರಿದಿದೆ

(ಪುಟ 5 ರಿಂದ) ಬಯಸುತ್ತಿದ್ದರು ಎಂದು ನನಗನ್ನಿಸುತ್ತದೆ. ನಾನು ಅನಂತಕುಮಾರರನ್ನು ಕಾಣಲು ದೆಹಲಿಗೆ ಹೋಗಿದ್ದಾಗ ಒಮ್ಮೆಒಬ್ಬ ಮಹಿಳೆ ಬಂದಳು. ಅವಳು ವಿಧವೆ. ಗತಿಸಿದ ಗಂಡನ ನೌಕರಿಯನ್ನು ಮಗನಿಗೆ ಕೊಡಿಸಬೇಕೆಂಬುದು ಅವಳ ಬೇಡಿಕೆಯಾಗಿತ್ತು. ಅವಳ ಅಹವಾಲನ್ನು ಆಲಿಸಿ, ಇಂತಿಂಥ ಮಂತ್ರಿಗಳ ಹತ್ತಿರ ಹೋಗು ಎಂದು ಮಾರ್ಗದರ್ಶನ ಮಾಡಿದ್ದು ಮಾತ್ರವಲ್ಲ; ಆ ಮಹಿಳೆಗೆ ಸ್ವಲ್ಪ ಹಣವನ್ನೂ ಕೊಟ್ಟು ಕಳುಹಿಸಿದರು. ನಂತರ, ಸಂಬಂಧಿಸಿದ ಮಂತ್ರಿಗಳಿಗೆ ಫೋನ್ ಮಾಡಿ ಕೆಲಸ ಮಾಡಿಕೊಡಲು ತಿಳಿಸಿದ್ದರು.

ಒಂದು ಸಲ ಅವರು ಕುಟುಂಬ ಸಮೇತ ಮುಂಬೈಗೆ ಬರುವವರಿದ್ದರು. “ಮಕ್ಕಳಿಗೆ ಇಷ್ಟವಾಗುವ ಸ್ಥಳಗಳನ್ನು ಹುಡುಕಿ ಇಡಿ, ಆದರೆ, ಈ ಕುರಿತು ಯಾರಿಗೂ ಮಾಹಿತಿ ನೀಡಬೇಡಿ” ಎಂದು ಹೇಳಿದ್ದರು. ಆ ದಿನಗಳಲ್ಲಿ ಅವರು ಮಕ್ಕಳೊಂದಿಗೆ ಮಕ್ಕಳಾಗಿ ಆಟವಾಡಿದ್ದನ್ನು ನಾನು ಕಣ್ಣಾರೆ ಕಂಡೆ. ಅವರನ್ನು ಗುರುತಿಸಿದ ಕರ್ನಾಟಕದ ಕೆಲವು ಯುವಕರು ಅವರ ಜೊತೆ ಫೋಟೋ ತೆಗೆಸಿಕೊಂಡರು. ಅನಂತಕುಮಾರ್ ಸರಳ ಹಾಗೂ ಸಾಧಾರಣ ಉಡುಪುಗಳನ್ನು ಧರಿಸುತ್ತಿದ್ದರು. ನನ್ನ ಉಡುಪನ್ನು ನೋಡಿ “ನಿನ್ನ ಕುರ್ತಾ ಮೊಳಕಾಲಿನಿಂದ ಇನ್ನೂ ಎರಡು ಇಂಚು ಕೆಳಗಿದ್ದರೆ ಚೆನ್ನ” ಎಂದು ಹೇಳಿದ್ದರು. ಇಂತಹ ಸಣ್ಣ ಸಣ್ಣ ಸಂಗತಿಗಳನ್ನೂ ಅನಂತಕುಮಾರರು ಗಮನಿಸುತ್ತಿದ್ದರು.

ಯೋಗಾಯೋಗ ಎಂಬಂತೆ, ಮುಖಂಡ ಆಶಿಷ್ ಶೇಲಾರ್ ನನಗೆ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರ ಚುನಾವಣೆಯ ಹೊಣೆಗಾರಿಕೆ ನೀಡಿದ್ದರು. ನಿರೀಕ್ಷೆಯಂತೆ ಅನಂತಕುಮಾರ್ ಗೆದ್ದರು. ಆ ಸಂದರ್ಭದಲ್ಲಿ ನಾವು ಅವರ ಇನ್ನೋವಾ ಕಾರಿನಲ್ಲಿ ಹೊರಟಿದ್ದೆವು. ರಕ್ಷಣಾ ಸಚಿವ ಮನೋಹರ್ ಪರಿಕ್ಕರ್ ಅವರು ಅಮೆರಿಕಾದಿಂದ ಕಳುಹಿಸಿದ ಮೇಲ್ ಮೆಸೇಜ್‌ನ್ನು ಮೊಬೈಲ್‌ನಲ್ಲಿ ಓದುತ್ತಿದ್ದರು. ಅದೊಂದು ಭಾವುಕ ಹಾಗೂ ಮಾರ್ಮಿಕ ಪತ್ರವಾಗಿತ್ತು. ಆ ಪತ್ರದ “ಈ ಜೀವನ ಎಷ್ಟೊಂದು ಅನಿಶ್ಚಿತವಾಗಿದೆ” ಎಂಬ ಒಂದು ಸಾಲನ್ನು ಮಾತ್ರ ನನಗೆ ಓದಿ ಹೇಳಿದರು. ಆಗ ಅನಂತಕುಮಾರ್ ಆರೋಗ್ಯವಾಗಿದ್ದರು. ನಂತರ ಅವರು ದೆಹಲಿಯಲ್ಲಿ ಭೇಟಿಯಾದಾಗ, ಅವರ ತೂಕ ಕಡಿಮೆಯಾಗಿದ್ದು ಗಮನಿಸಿದೆ. “ಸಮಸ್ಯೆ ಇದ್ದರೆ ಅದನ್ನು ಮನಸ್ಸಿಗೆ ಹಚ್ಚಿಕೊಳ್ಳದಿರಿ” ಎಂದಿದ್ದೆ. ಅವರು ಪ್ರತಿಕ್ರಿಯೆ ನೀಡಿರಲಿಲ್ಲ. ಆದರೆ, ಸ್ವಲ್ಪ ದಿನದ ನಂತರ ಅವರಿಗೂ ಕ್ಯಾನ್ಸರ್ ಇದೆ ಎಂದು ತಿಳಿಯಿತು. ಅದೇನು ಯೋಗಾಯೋಗವೋ! ನಾನು ಸಂಬಂಧಿಕರೊಬ್ಬರ ಮದುವೆಗೆಂದು ಬೆಂಗಳೂರಿಗೆ ಬಂದಿದ್ದೆ, ಶಂಕರ ಆಸ್ಪತ್ರೆಯಲ್ಲಿ ಅನಂತಕುಮಾರರನ್ನು ಕಂಡು ಮಾತನಾಡಿಸಿದ್ದೆ. ಆ ರಾತ್ರಿ ನಾನು ಬೆಂಗಳೂರಿನಲ್ಲಿಯೇ ತಂಗಿದ್ದೆ. ಅನಂತಕುಮಾರರು ಚೇತರಿಸಿಕೊಳ್ಳುತ್ತಿದ್ದಾರೆ ಎಂದು ವೈದ್ಯರು ಹೇಳಿದ ದಿನವೇ ಅವರು ಇನ್ನಿಲ್ಲ ಎಂಬ ಸುದ್ದಿಯೂ ಬಂದಿತು. ನಾಸಿಕ್ ಹಾಗೂ ಮಧ್ಯಪ್ರದೇಶದ ಮಹೇಶ್ವರದಲ್ಲಿ ಅವರ ಅಸ್ಥಿ ವಿಸರ್ಜಿಸಲು ಅವರ ಕುಟುಂಬ ಪರಿವಾರ ನನಗೆ ಜವಾಬ್ದಾರಿ ನೀಡಿತ್ತು. ಇದು ನನ್ನ ಸೌಭಾಗ್ಯ.

ಒಂದು ತಮಾಷೆಯ ಪ್ರಸಂಗವನ್ನು ನೆನೆಸಿಕೊಂಡು ಲೇಖನವನ್ನು ಮುಗಿಸುತ್ತೇನೆ. ಒಮ್ಮೆ ಮೆರೀನ್ ಡ್ರೈವ್‌ನಲ್ಲಿ ವಾಕಿಂಗ್ ಮಾಡುತ್ತಿದ್ದಾಗ ಕಡಲೆಕಾಯಿ ತಿನ್ನುವ ಮನಸ್ಸಾಗಿದೆ ಎಂದು ಅವರು ಹೇಳಿದರು. ಅವರ ಹಿಂದೆ ಅಂಗರಕ್ಷಕರು ಇದ್ದರು. ಕಡಲೆಕಾಯಿ ಮಾರುವವನ ಕಡೆಗೆ ಅನಂತಕುಮಾರರು ಹೋಗುತ್ತಲೇ ಅಂಗರಕ್ಷಕರೂ ಹಿಂಬಾಲಿಸಿದರು. ಇದನ್ನು ಕಂಡು ಕಡಲೆಕಾಯಿ ಮಾರಾಟಗಾರ ಓಡಿ ಹೋದ. ಹೀಗೆ, ಮೂರ್ನಾಲ್ಕು ಬಾರಿ ಆಯಿತು. ಅವರ ಹಿಂದಿದ್ದ ಅಂಗರಕ್ಷಕರಿಗೆ ಹೆದರಿ ಅವನು ಓಡಿಹೋಗುತ್ತಿದ್ದ. ನಂತರ, ನಾನೇ ಬೇರೆ ಕಡೆ ಹೋಗಿ ಕಡಲೆಕಾಯಿ ತಂದು ಕೊಟ್ಟಿದ್ದೆ.

ಅನಂತಕುಮಾರ್ ಯಾವಾಗಲೂ ಹಸನ್ಮುಖರಾಗಿಯೇ ಇರುತ್ತಿದ್ದರು. ಅನಂತಕುಮಾರರು ಸಾಮಾನ್ಯ ಜನರಲ್ಲೂ ವಿಶ್ವಾಸವಿರಿಸುತ್ತಿದ್ದರು. ಆದ್ದರಿಂದಲೇ, ಪ್ರತಿಯೊಬ್ಬರ ಹೃದಯದಲ್ಲಿ ಅಜಾತಶತ್ರುವಾಗಿ ನೆಲೆಸಿದ್ದಾರೆ. ನಾನಂತೂ ಹೀಗೆ ತಿಳಿದುಕೊಂಡಿದ್ದೇನೆ.

# "ಸಾಮಾನ್ಯ ಕಾರ್ಯಕರ್ತ ದೇಶದ ನೀತಿ ನಿರೂಪಕನಾದ ಅಚ್ಚರಿ"

(ಪುಟ 1 ರಿಂದ) ಆದರೆ ಅವರಿಂದ ಪ್ರೇರಿತರಾಗಿ ಅವರ ಹಾದಿಯನ್ನು ಅನುಸರಿಸುವವರು ಅತಿ ಕಡಿಮೆ. ಆದರೆ ಅವರಿಗಿಂತ ೨೪ ವರ್ಷ ಮೊದಲು ನಿಧನರಾದ ಹೆಡಗೆವಾರ್ ಶ್ರೇಷ್ಠರಾಗಿದ್ದುದರಿಂದ ಅವರ ಆದರ್ಶಗಳನ್ನು ಇಂದಿನ ಪೀಳಿಗೆಯ ಹುಡುಗರೂ ಅನುಸರಿಸುತ್ತಿದ್ದಾರೆ” ಎಂದು ತಿಳಿಸಿದರು. “ರಾಜಿಯಿಲ್ಲದ ಶ್ರದ್ಧೆ ಹಾಗೂ ಬದ್ಧತೆಯನ್ನು ಆರ್. ಎಸ್. ಎಸ್. ಕಲಿಸಿಕೊಡುತ್ತದೆ. ಈ ಗುಣಗಳನ್ನು ಬೆಳೆಸಿಕೊಂಡ ನಾಯಕರು ಶ್ರೇಷ್ಠರಾಗಿರುತ್ತಾರೆ. ಇಂತಹ ನಾಯಕರನ್ನು. ಆರ್ ಎಸ್. ಎಸ್. ನೀಡಿದೆ. ವಿಕಸಿತ ಭಾರತದ ಆಶಯ ಹೊತ್ತ ನಾಯಕರ ವಾರಸಿಕೆಯನ್ನು ನಾವು ಮುಂದುವರಿಸಬೇಕು. ಈ ನಿಟ್ಟಿನಲ್ಲಿ, ಅನಂತಕುಮಾರರ ಬದುಕಿನ ಹೆಜ್ಜೆಗಳಿವೆ. ಆ ಹೆಜ್ಜೆಗಳಲ್ಲಿ ಈಗ, ತೇಜಸ್ವಿನಿ ಅನಂತಕುಮಾರರು ನಡೆದು, ವಾರಸಿಕೆಯನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ. ಇಂತಹ ನಡೆಗಳಲ್ಲಿ ಭಾರತದ ಶ್ರೇಷ್ಠತೆ ಇದೆ. ನಮ್ಮ ಹಿಂದಿನವರು ನಮಗೇನು ವಾರಸುದಾರಿಕೆ ಕೊಟ್ಟಿದ್ದಾರೆ, ಅದನ್ನು ನಾವು ಉಪೇಕ್ಷೆ ಮಾಡಬಾರದು, ಉದಾಸೀನವೂ ಮಾಡಬಾರದು. ನಮ್ಮ ಜೀವನದ ಬಂಡವಾಳವನ್ನೂ ಮಾಡಿಕೊಳ್ಳಬಾರದು. ಏಕೆಂದರೆ, ನಮ್ಮ ವಾರಸಿಕೆಯನ್ನು ನಮ್ಮ ಮುಂದಿನವರಿಗೆ ತಲುಪಿಸುವ ಹೊಣೆಗಾರಿಕೆ ನಮ್ಮದು” ಎಂದು ರಾಮಣ್ಣನವರು ಹೇಳಿದರು. ಕಳೆದ ಒಂದು ವರ್ಷದಲ್ಲಿ ಗ್ರಾಮೀಣ ಮಹಿಳೆಯರಲ್ಲಿ ನಾಯಕತ್ವದ ಬೆಳವಣಿಗೆಗಾಗಿ “ಗ್ರಾಮ ಚೇತನ” ಎಂಬ ಕಾರ್ಯಕ್ರಮದ ಅಡಿಯಲ್ಲಿ ಅನೇಕ ಶಿಬಿರಗಳನ್ನು ನಡೆಸಿಕೊಂಡು ಬರಲಾಗಿದೆ. ವಿವಿಧ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು ಸಹ ನಿರಂತರವಾಗಿ ಭೇಟಿ ನೀಡುತ್ತಿದ್ದು, ಅನಂತಕುಮಾರರ ಜೀವನಶೈಲಿಯಿಂದ ಪ್ರಭಾವಿತರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ. ವಿಷ್ಣುಕಾಂತ ಚಟಪಲ್ಲಿ ಮಾತನಾಡಿ, “ಗ್ರಾಮೀಣ ಮಹಿಳೆಯರು, ಪಂಚಾಯತ್‌ಸದಸ್ಯರು ಸೇರಿದಂತೆ ಈ ವರೆಗೆ 15 ಗ್ರಾಮಗಳಿಂದ 200 ಮಹಿಳೆಯರು ತರಬೇತಿ ಪಡೆದಿದ್ದಾರೆ. ಈ ತರಬೇತಿ ಪಡೆದ ಮಹಿಳೆಯರು, ನಂತರದ ಹಂತದಲ್ಲಿ ಏನು ಮಾಡಬೇಕು ಎಂಬುದರ ಬಗ್ಗೆ ಸಾಮಾಜಿಕ ಚಟುವಟಿಕೆಗಳ ರೂಪುರೇಷೆಗಳನ್ನು ಸಿದ್ಧಪಡಿಸಬೇಕು. ಆ ಮೂಲಕ ಗ್ರಾಮೀಣ ಮಹಿಳೆಯರು ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆರ್ಥಿಕವಾಗಿ ಸ್ವಾವಲಂಬನೆ ಸಾಧಿಸುವಂತಾಗಬೇಕು. ಅವರಲ್ಲಿರುವ ನೇತೃತ್ವ-ಕರ್ತೃತ್ವಶಕ್ತಿ ಬೆಳೆಸಲು ಅನಂತ ಪ್ರೇರಣಾ ಕೇಂದ್ರ ನೆರವಾಗಬೇಕೆಂಬ ಆಶಯವಿದೆ” ಎಂದರು.

ಈ ಆಶಯದ ಸಾಕಾರಕ್ಕಾಗಿ ಹುಬ್ಬಳ್ಳಿಯ ಅನಂತ ಪ್ರೇರಣಾ ಕೇಂದ್ರದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರ ಅಧ್ಯಕ್ಷತೆಯಲ್ಲಿ, ಪ್ರಲ್ಹಾದ್ ಜೋಶಿ, ನಂದಕುಮಾರ್, ಜಗದೀಶ್ ಬಾಪಟ್, ಲಕ್ಷ್ಮಣರಾವ್ ಓಕ್, ಗುಡ್ಡು ಇನಾಂದಾರ್, ಪೂರ್ಣಪ್ರಜ್ಞ, ವೀಣಾ ಅಠವಲೆ, ಸ್ವಾತಿ ಪಟ್ಟೇದ್, ಭಾರತಿ ನಂದಕುಮಾರ್, ಅಚ್ಯುತ್ ಲಿಮಯೆ ಮತ್ತು ವಿಷ್ಣುಕಾಂತ ಚಟಪಲ್ಲಿಯವರನ್ನು ಒಳಗೊಂಡ ಸಲಹಾ ಸಮಿತಿ ರಚಿಸಲಾಗಿದೆ ಎಂದರು.




**ಹುಬ್ಬಳ್ಳಿಯ ಅನಂತ ಪ್ರೇರಣಾ ಕೇಂದ್ರದ ವಾರ್ಷಿಕೋತ್ಸವದಲ್ಲಿ ಕೇಂದ್ರ ಸಚಿವ ಶ್ರೀ ಪ್ರಲ್ಹಾದ್ ಜೋಶಿ ಅವರು ಅನಂತಪಥ ಮಾಸಪತ್ರಿಕೆ 45ನೇ ಸಂಚಿಕೆಯನ್ನು ಬಿಡುಗಡೆ ಮಾಡಿದರು.**

ಶ್ರೀ ಪೂರ್ಣಪ್ರಜ್ಞ ಅವರು ಮಾತನಾಡಿ, ಹುಬ್ಬಳ್ಳಿಯ ಅನಂತ ಪ್ರೇರಣಾ ಕೇಂದ್ರದ ವೈಶಿಷ್ಟ್ಯಗಳನ್ನು ವಿವರಿಸಿ, ಶ್ರೀ ಅನಂತಕುಮಾರರು ಯೋಚಿಸುವ ರೀತಿಯಲ್ಲಿ ನಾವೆಲ್ಲರೂ ಸಹ ಯೋಚಿಸುವಂತಾದರೆ ಅನಂತ ಪ್ರೇರಣಾ ಕೇಂದ್ರವು ತನ್ನೆಲ್ಲ ಸಾಮರ್ಥ್ಯದೊಂದಿಗೆ ಸಮಾಜಕ್ಕೆ ಉತ್ತಮ ಕೊಡುಗೆ ನೀಡಬಲ್ಲುದು ಎಂದು ಆಶಿಸಿದರು.

ಶಾಸಕರಾದ ಶ್ರೀ ಮಹೇಶ್ ಟೆಂಗಿನಕಾಯಿ, ಶ್ರೀ ಎಚ್. ಎನ್.ನಂದಕುಮಾರ್, ಮಾಜಿ ಶಾಸಕ ಶ್ರೀ ಅಶೋಕ ಕಾಟವೆ, ಶ್ರೀ ಸುಭಾಷ್ ಸಿಂಗ್ ಜಮಾದಾರ್, ಹಿರಿಯರಾದ ಶ್ರೀ ಲಕ್ಷ್ಮಣರಾವ್ ಓಕ್, ಶ್ರೀ ಶ್ರೀಧರ ನಾಡಿಗೇರ್, ಶ್ರೀ ರಂಗಾಬದ್ದಿ, ಶ್ರೀ ಗೋವಿಂದ ಜೋಶಿ, ಡಾ. ಶ್ರೀ ಜೆ.ವಿ. ಆಚಾರ್ಯ, ಪಾಲಿಕೆ ಸದಸ್ಯರಾದ ಶ್ರೀ ತಿಪ್ಪಣ್ಣ ಮಜ್ಜಿಗಿ, ಶ್ರೀಮತಿ ರೂಪಾ ಶೆಟ್ಟಿ, ಶ್ರೀಮತಿ ಮೀನಾಕ್ಷಿ ವಂಟಮೂರಿ, ಶ್ರೀ ಸಂತೋಷ ಚವ್ಹಾಣ, ಅನಂತ ಪ್ರೇರಣಾ ಕೇಂದ್ರದ ಶ್ರೀ ಜಿ.ಎಂ. ಇನಾಂದಾರ್, ಶ್ರೀಮತಿ ವೀಣಾ ಅಠವಲೆ ಹಾಗೂ ಹಲವರು ಪ್ರಮುಖರು ಉಪಸ್ಥಿತರಿದ್ದರು.

# ಭಾರತೀಯ ಇತಿಹಾಸದ ಏಕಾಂಗವೀರ ಪಿ. ಎನ್. ಓಕ್

**ವ್ಯಕ್ತಿ ವಿಶೇಷ ಮಾಲಿಕೆ**

**- ಕೆ. ಜನಾರ್ದನ ತುಂಗ**



ಅಪ್ರತಿಮ ರಾಷ್ಟ್ರಭಕ್ತಿ ಮತ್ತು ಕ್ಷಾತ್ರ - ಇವು ಸೈನಿಕನಿಗೆ ಅಲಂಕಾರ. ಅಂತೆಯೇ, ಸತ್ಯನಿಷ್ಠೆ, ನಿಷ್ಪಕ್ಷಪಾತ, ನೈತಿಕತೆ ಮತ್ತು ವೃತ್ತಿನಿಷ್ಠೆಗಳು ಪತ್ರಕರ್ತನೊಬ್ಬನಿಗೆ ಭೂಷಣ. ಇತಿಹಾಸಕಾರನೊಬ್ಬನಿಗೆ ಈ ಎಲ್ಲ ಗುಣಗಳ ಜೊತೆಗೆ ಉತ್ತಮ ಸಂವಹನ ಕಲೆ, ಅದ್ಭುತ ವಿಶ್ಲೇಷಣಾ ಶಕ್ತಿ, ಅಪಾರವಾದ ಆಕರಗಳ ಸೌಲಭ್ಯ ಮತ್ತು ಸಂಶೋಧನಾ ಕೌಶಲ್ಯಗಳೂ ಇರಬೇಕು. ನಮ್ಮ ದೇಶ ಕಂಡ ಅಪರೂಪದ ಇತಿಹಾಸಕಾರರಾದ ಶ್ರೀ ಪುರುಷೋತ್ತಮ ನಾಗೇಶ್ ಓಕ್ ಅವರಲ್ಲಿ ಈ ಎಲ್ಲ ಗುಣಗಳೂ ಇದ್ದುವು. ಅವರು ಸೈನಿಕರಾಗಿ ಭಾರತೀಯ ಸೇನೆಯಲ್ಲೂ ಆಜಾದ್‌ಹಿಂದ್ ಫೌಜ್‌ನಲ್ಲೂ ಕರ್ತವ್ಯ ನಿರ್ವಹಿಸಿದ್ದರು; ಪತ್ರಕರ್ತರಾಗಿ ಹಿಂದುಸ್ತಾನ್ ಟೈಮ್ಸ್ ಮತ್ತು ಸ್ಟೇಟ್ಸ್‌ಮನ್ ಪತ್ರಿಕೆಗಳಲ್ಲಿ ಕೆಲಸ ಮಾಡಿದರು. ಇತಿಹಾಸಕಾರರಾಗಿ ಪಟ್ಟಭದ್ರ ಇತಿಹಾಸಕಾರರ ಏಕಪಕ್ಷೀಯ ನಿಲುವುಗಳಿಂದ ನಲುಗಿ ಹೋಗಿದ್ದ ಇತಿಹಾಸದ ಪುನಾರಚನೆಯ ಅಡಿಪಾಯವನ್ನು ಹಾಕಿದ ಕೀರ್ತಿ ಓಕ್ ಅವರಿಗೆ ಸಲ್ಲುತ್ತದೆ. ಅವರು ತಮ್ಮ ವೃತ್ತಿಜೀವನವನ್ನುಪ್ರಾರಂಭ ಮಾಡಿದ್ದು ಶಿಕ್ಷಕರಾಗಿ; ಹೀಗಾಗಿ ಅವರಲ್ಲಿ ಶಿಕ್ಷಕಮನೋವೃತ್ತಿ ಸದಾಕಾಲ ಜಾಗೃತವಾಗಿದ್ದುದೂ ಕಂಡುಬರುತ್ತದೆ.

ಮಹಾರಾಷ್ಟ್ರದ ಎಂಟುನೂರು ವರ್ಷಗಳ ಇತಿಹಾಸವನ್ನು ಗಮನಿಸಿದರೆ ಅಲ್ಲಿನ ಒಂದು ಬ್ರಾಹ್ಮಣ ವರ್ಗವಿಶೇಷವು ಶಿಕ್ಷಣದ ಜೊತೆಗೆ ಕ್ಷಾತ್ರವನ್ನೂ ರೂಢಿಸಿಕೊಂಡು ಸಮಾಜದಲ್ಲಿ ಸ್ಥಿರತೆಯನ್ನೂ ದೇಶಕ್ಕೆ ರಕ್ಷಣೆಯನ್ನೂ ನೀಡಲು ಸತತವಾಗಿ ಶ್ರಮಿಸಿರುವುದು ಕಂಡುಬರುತ್ತದೆ. ಅಂತಹ ಬ್ರಾಹ್ಮಣ ಪರಿವಾರದ ಒಂದು ಕುಟುಂಬದ ಉಪನಾಮ ಓಕ್. ಈ ಓಕ್ ಪರಿವಾರದಲ್ಲಿ ಜನಿಸಿದವರು ಶ್ರೀ ಪಿ. ಎನ್. ಓಕ್. ಅವರು ಜನಿಸಿದ್ದು ಇಂದೋರಿನಲ್ಲಿ, ೧೯೧೭ರ ಮಾರ್ಚ್ ೨ರಂದು. ೧೯೩೩ರಲ್ಲಿ ಮ್ಯಾಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ, ನಂತರ ಮುಂಬಯಿ ವಿಶ್ವವಿದ್ಯಾಲಯದಿಂದ ಬಿ.ಎ. (೧೯೩೭), ಎಂ.ಎ. (೧೯೩೯) ಮತ್ತು ಕಾನೂನು ಪದವಿ (೧೯೪೦) ಗಳಿಸಿದರು.

ವಿದ್ಯಾಭ್ಯಾಸ ಮುಗಿಸಿ ಒಂದು ವರ್ಷ ಶಿಕ್ಷಕರಾಗಿ ಕೆಲಸ ಮಾಡಿದ ಶ್ರೀ ಓಕ್, ಖಡ್ಕಿಯಲ್ಲಿದ್ದ ಮಿಲಿಟರಿ ಶಾಲೆಯಲ್ಲಿ ತರಬೇತಿಗಾಗಿ ಸೇರಿಕೊಂಡರು. ಅಲ್ಲಿ ಎಂಟು ತಿಂಗಳ ತರಬೇತಿ ಪಡೆದ ನಂತರ ಅದಾಗಲೇ ಪ್ರಾರಂಭವಾಗಿದ್ದ ದ್ವಿತೀಯ ಮಹಾಯುದ್ಧದಲ್ಲಿ ತೊಡಗಿಕೊಂಡಿದ್ದ ಭಾರತೀಯ ಸೇನೆಯನ್ನು ಸಿಂಗಾಪುರದಲ್ಲಿ ಸೇರಿಕೊಂಡರು. ವಿಯೆಟ್ನಾಮಿನ ಸೈಗಾನ್ ಪ್ರದೇಶದಲ್ಲಿ ಹೋರಾಡುತ್ತಿದ್ದಾಗ ಇತರ ೬೦೦೦೦ ಸೈನಿಕರೊಂದಿಗೆ ಜಪಾನೀಯರ ಕೈಸೆರೆಯಾದರು. ಸೆರೆಯಿಂದ ಬಿಡುಗಡೆಯಾದ ನಂತರ, ನೇತಾಜಿ ಸುಭಾಶ್‌ಚಂದ್ರ ಬೋಸರು ಸ್ಥಾಪಿಸಿದ ಆಜಾದ್ ಹಿಂದ್ ಫೌಜ್ ನಲ್ಲಿ ಸೇರಿಕೊಂಡು ಭಾರತದ ವಿಮೋಚನೆಗಾಗಿ ಹೋರಾಟ ಪ್ರಾರಂಭಿಸಿದರು. ಆಜಾದ್ ಹಿಂದ್ ರೇಡಿಯೋದ ನಿರ್ದೇಶಕರಾಗಿ ಕೆಲಸ ಮಾಡುತ್ತ ನೇತಾಜಿಯವರಿಗೆ ಹತ್ತಿರವಾದರು.

ದ್ವಿತೀಯ ವಿಶ್ವಯುದ್ಧವು ಮುಗಿದ ನಂತರ ಬ್ರಿಟಿಷರ ಕಣ್ಣುತಪ್ಪಿಸಿ ಕಾಡುಮೇಡುಗಳಲ್ಲಿ ಅಲೆಯುತ್ತ ಓಕ್ ಅವರು ೧೯೪೭ರ ಹೊತ್ತಿಗೆ ಕಲ್ಕತ್ತಾ ತಲುಪಿದರು. ೧೯೪೭ರಿಂದ ೧೯೫೩ರ ವರೆಗೆ ದೆಹಲಿಯಲ್ಲಿ ಹಿಂದುಸ್ತಾನ್ ಟೈಮ್ಸ್ ಮತ್ತು ಸ್ಟೇಟ್ಸ್‌ಮನ್ ಪತ್ರಿಕೆಗಳ ವರದಿಗಾರರಾಗಿ ಕೆಲಸ ಮಾಡಿದರು. ೧೯೫೪ ರಿಂದ ೧೯೫೭ರ ವರೆಗೆ ಮಾಹಿತಿ ಮತ್ತು ಪ್ರಸಾರ ಮಂತ್ರಾಲಯದಲ್ಲಿ ಪ್ರಚಾರ ಅಧಿಕಾರಿಯಾಗಿ ಕೆಲಸ ಮಾಡಿದರು. ೧೯೫೯ರಿಂದ ೧೯೭೪ರ ವರೆಗೆ ದೆಹಲಿಯ ಅಮೆರಿಕ ರಾಯಭಾರ ಕಚೇರಿಯ ಮಾಹಿತಿಸೇವಾ ವಿಭಾಗದಲ್ಲಿ ಉಪಸಂಪಾದಕರಾಗಿ ಕರ್ತವ್ಯ ನಿರ್ವಹಿಸಿದರು.

ಇದು ಅವರ ಜೀವನಯಾಪನೆಗಾಗಿ ಕೈಗೊಂಡ ವೃತ್ತಿಗಳ ಹಾದಿಯಾದರೆ ತಮ್ಮ ಆಸಕ್ತಿಯ ಪೋಷಣೆಗಾಗಿ ಅವರು ತುಳಿದ ಹಾದಿ ಇನ್ನೂ ರೋಚಕವಾಗಿದೆ. ಇತಿಹಾಸವು ಅವರಿಗೆ ಪ್ರಿಯವಾದ ವಿಷಯವಾಗಿತ್ತು. ಪಾಶ್ಚಿಮಾತ್ಯ ಇತಿಹಾಸಕಾರರು ಭಾರತದ ಇತಿಹಾಸವನ್ನು ಭ್ರಷ್ಟಗೊಳಿಸುವ ಕೆಲಸ ಮಾಡಿದರು; ವೈದಿಕ ಧರ್ಮವನ್ನು ನಾಶಮಾಡಲು ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸಿದರು; ದುರದೃಷ್ಟವಶಾತ್, ನಮ್ಮದೇಶದ ಇತಿಹಾಸಕಾರರು ಸ್ವಾರ್ಥದಿಂದ ಪ್ರೇರಿತರಾಗಿ ಅವರ ಜೊತೆ ಕೈಜೋಡಿಸುತ್ತಿದ್ದಾರೆ ಎಂಬುದು ಓಕ್ ಅವರ ಅಭಿಪ್ರಾಯ. ಈ ನಿಟ್ಟಿನಲ್ಲಿ 'ಝಾನ್ಸಿ ಕೀ ರಾಣಿ' ಎಂಬ ಮೂರು ಅಂಕಗಳ ನಾಟಕವನ್ನು ೧೯೪೩ರಲ್ಲಿ ಬರೆದು ರಾಣಿ ಝಾನ್ಸಿ ಲಕ್ಷ್ಮೀಬಾಯಿ ರೆಜಿಮೆಂಟ್ ಸ್ಥಾಪನೆಯ ಪ್ರಥಮ ವಾರ್ಷಿಕೋತ್ಸವದಂದು ಆಡಿಸಿದರು. ತಮ್ಮ ವ್ಯಾಪಕವಾದ ಓದು, ಪ್ರವಾಸ ಮತ್ತು ಸಂಶೋಧನೆಗಳ ಹಿನ್ನೆಲೆಯಲ್ಲಿ ಭಾರತೀಯ ಇತಿಹಾಸಕಾರರ ಅನೇಕ ಪ್ರಮಾದಗಳನ್ನು ಅವರು ಗುರುತಿಸಿದರು. ಆರ್ಯರು ಭಾರತಕ್ಕೆ ಹೊರಗಿನಿಂದ ಬಂದವರು ಎಂಬ ವಾದವನ್ನು ಅವರು ಸೋದಾಹರಣವಾಗಿ ತಿರಸ್ಕರಿಸಿದರು. ಮೊದಮೊದಲು ಅವರ ಈ ವಾದಕ್ಕೆ ವಿರೋಧ ವ್ಯಕ್ತವಾದರೂ ಇಂದು ಅನೇಕ ವಿಶ್ವವಿದ್ಯಾಲಯಗಳು ಈ ಕುರಿತು ಸಂಶೋಧನೆ ನಡೆಸಿ ಓಕ್ ಅವರ ವಾದವು ಸಮಂಜಸವೆಂದು ರುಜುವಾತು ಪಡಿಸಿವೆ. ಜಗತ್ತಿನ ಅನೇಕ ಐತಿಹಾಸಿಕ ಘಟನೆಗಳ ಮೂಲ ಭಾರತೀಯವೇ ಎಂದು ಅವರು ಬಲವಾಗಿ ಪ್ರತಿಪಾದಿಸಿದರು. "ಕ್ರೈಸ್ತ ಮತ್ತು ಇಸ್ಲಾಂ ಮತಗಳ ಮೂಲ ಭಾರತದ ವೈದಿಕ ಮತ, ಹೀಗಾಗಿ ಆ ಧರ್ಮಗಳು ವೈದಿಕ ಧರ್ಮದ ಕೆಲವು ಆಚರಣೆಗಳನ್ನು ಅಳವಡಿಸಿಕೊಂಡಿರುವುದನ್ನು ಕಾಣಬಹುದು" - ಎಂಬುದು ಅವರ ಅಭಿಪ್ರಾಯ. ವ್ಯಾಟಿಕನ್ ಮತ್ತು ಕಾಬಾಗಳು ಮೂಲತಃ ಹಿಂದೂ ದೇವಾಲಯಗಳು ಎಂದೂ ಅವರು ಬರೆದಿದ್ದಾರೆ. ಅವರ ಇಂತಹ ಹೇಳಿಕೆಗಳಿಗೆ ಖಂಡನೆ ವ್ಯಕ್ತವಾದರೂ ಅವುಗಳಿಗೆ ಸಮರ್ಥನೆ ನೀಡುವ ಸಂಶೋಧನೆಗಳು ಕೂಡ ಇತ್ತೀಚೆಗೆ ಹೆಚ್ಚಾಗಿ ನಡೆಯುತ್ತಿವೆ.

ಅವರ ಅತ್ಯಂತ ವಿವಾದಕ್ಕೆಡೆ ಮಾಡಿಕೊಟ್ಟ ಇನ್ನೊಂದು ಪ್ರಸಿದ್ಧ ಹೇಳಿಕೆ ತಾಜ್‌ಮಹಲ್ ಬಗ್ಗೆ. ಮುಘಲರು ಭಾರತದಲ್ಲಿ ಇಷ್ಟೊಂದು ಭವ್ಯ ನಿರ್ಮಾಣಗಳನ್ನು ಮಾಡಿದ್ದರೆ ತಮ್ಮ ಮೂಲ ಸ್ಥಾನಗಳಲ್ಲಿ ಯಾವ ನಿರ್ಮಾಣವನ್ನೂ ಯಾಕೆ ಮಾಡಲಿಲ್ಲ ಎಂಬುದು ಅವರಿಗೆ ಕುತೂಹಲದ ವಿಷಯವಾಗಿತ್ತು. ಸಮಕಾಲೀನ ಮುಸ್ಲಿಂ ಇತಿಹಾಸದ ಆಕರಗಳಾದ ಬಾದ್‌ಶಾ ನಾಮಾ, ವಾಕಿಯಾತ್ ಜಹಾಂಗೀರಿ, ಶಹಜಹಾನ್ ನಾಮಾ, ತಾರೀಖ್-ಇ-ಮುಫಜ್ಜಲಿ, ಮೀರತ್ - ಇ – ಆಲಂ, ಅಲಾಂಗೀರ್ ನಾಮಾ ಮತ್ತು ಮುಸ್ತಖಾಬ್-ಉಲ್-ಲುಬಾಬ್ ಗ್ರಂಥಗಳಲ್ಲಿ ತಾಜಮಹಲಿನ ಉಲ್ಲೇಖವೇ ಇಲ್ಲದಿರುವುದರಿಂದ ಅದು ಮುಘಲರ ನಿರ್ಮಾಣವೇ ಅಲ್ಲ ಎಂದು ಅವರು ಪ್ರತಿಪಾದಿಸಿದರು. ಪರ್ಶಿಯನ್ ಭಾಷೆಯಲ್ಲಿರುವ ಬಾದ್‌ಶಾ ನಾಮಾದ ೪೦೨ ಮತ್ತು ೪೦೩ನೇ ಪುಟಗಳಲ್ಲಿ ಅದು ರಾಜಾ ಮಾನ್‌ಸಿಂಗ್‌ನ ಅರಮನೆಯಾಗಿದ್ದು ಶಹಜಹಾನ್ ಅದನ್ನು ಸಮಾಧಿಗಾಗಿ ಬಳಸುವ ಉದ್ದೇಶದಿಂದ ಪಡೆದುಕೊಂಡಿದ್ದ ಎಂಬ ಉಲ್ಲೇಖವನ್ನು ಪತ್ತೆಹಚ್ಚಿದರು. ಇಷ್ಟೆಲ್ಲ ಪುರಾವೆಗಳನ್ನು ನೀಡಿದರೂ ಇಂದಿನ ಅನೇಕ ಆಸ್ಥಾನ ಇತಿಹಾಸಕಾರರು ಸತ್ಯವನ್ನು ಒಪ್ಪಿಕೊಳ್ಳಲು ಹಿಂಜರಿಯುತ್ತಿರುವುದು ವಿಷಾದನೀಯ.

ಭಾರತೀಯ ಇತಿಹಾಸದ ಪರಿಷ್ಕರಣೆ ಮತ್ತು ಪುನಾರಚನೆಗಾಗಿ ಅವರು 'ಇನ್ಸ್ಟಿಟ್ಯೂಟ್ ಫಾರ್ ರೀರೈಟಿಂಗ್ ಇಂಡಿಯನ್ ಹಿಸ್ಟರಿ' ಎಂಬ ಸಂಸ್ಥೆಯನ್ನು ೧೯೬೩ರಲ್ಲಿ ಪ್ರಾರಂಭಿಸಿ ಅದರ ಆಶ್ರಯದಲ್ಲಿ ಇತಿಹಾಸದ ವಿಷಯಗಳಿಗೇ ಮೀಸಲಾದ 'ಇತಿಹಾಸ ಪತ್ರಿಕಾ' ಎಂಬ ತ್ರೈಮಾಸಿಕ ಪತ್ರಿಕೆಯನ್ನು ೧೯೮೦ರ ದಶಕದಲ್ಲಿ ನಡೆಸಿದರು. Tajmahal: The True Story, World Vedic Heritage: A History of Histories, Who Says Akbar was Great, Some Blunders Of Indian Historical Research, Learning Vedic Astrology, ಭಾರತ್ ಮೇ ಮುಸ್ಲಿಂ ಸುಲ್ತಾನ್, ಫತೇಪುರ ಸಿಕ್ರಿ ಏಕ್ ಹಿಂದೂ ನಗರಿ - ಅವರು ಬರೆದ ವಿದ್ವತ್ಪೂರ್ಣ ಪುಸ್ತಕಗಳಲ್ಲಿ ಕೆಲವು.

ಓಕ್ ಅವರು ದಿನಾಂಕ ೦೪/೧೨/೨೦೦೭ರಂದು ಪುಣೆಯಲ್ಲಿ ಇಹಲೋಕ ತ್ಯಜಿಸಿದರು. ಎಡಪಂಥೀಯ ಆಸ್ಥಾನ ವಿದ್ವಾಂಸರ ಕಪಿಮುಷ್ಟಿಯಲ್ಲಿ ಸಿಲುಕಿ ಭ್ರಷ್ಟವಾಗಿದ್ದ ಇತಿಹಾಸವನ್ನು ಪುನರ್ವಿಮರ್ಶೆ ಮಾಡಲು ಅಹರ್ನಿಶಿ ದುಡಿದ ಓಕ್ ಅವರು ಈ ನಿಟ್ಟಿನಲ್ಲಿ ಶ್ರಮಿಸುತ್ತಿರುವ ಅನೇಕ ಸಮಕಾಲೀನ ಇತಿಹಾಸಕಾರರಿಗೆ ಪ್ರೇರಕಶಕ್ತಿಯಾಗಿದ್ದಾರೆ.

# ನೀರಕಾಯಿ ಅಥವಾ ಪಿಚಕಾರಿ ಮರ

ಸಸ್ಯಲೋಕ ಪರಿಚಯ ಮಾಲಿಕೆ- 28

ಸ್ಪಾಥೋಡಿಯಾ ಕ್ಯಾಂಪಾನುಲಾಟಾ ಎಂಬ ವೈಜ್ಞಾನಿಕ ಹೆಸರಿನ ನೀರಕಾಯಿ ಮರಗಳನ್ನು ವಿಶ್ವದ ಬಹುತೇಕ ದೇಶಗಳಲ್ಲಿ ನೋಡಬಹುದು. ಕರ್ನಾಟಕದಾದ್ಯಂತ ಇರುವ ಸಾಲುಮರಗಳಲ್ಲಿ ಈ ಮರಗಳದ್ದೇ ಸಿಂಹಪಾಲು. ಸುಮಾರು ೭ ರಿಂದ ೨೫ ಮೀಟರ್ ಎತ್ತರಕ್ಕೆ ಬೆಳೆಯುವ ಮರಗಳು ಹೊಳೆಯುವ ಕೆಂಪು-ಕಿತ್ತಳೆ ಅಥವಾ ಕಡುಗೆಂಪು (ಕೆಲವೊಮ್ಮೆ ಹಳದಿ) ಹೂವುಗಳನ್ನು ಹೊಂದಿರುತ್ತವೆ. ಹೂವಿನ ಮೊಗ್ಗುಗಳನ್ನು ಒತ್ತಿದಾಗ ಅದರಲ್ಲಿ ತುಂಬಿರುವ ನೀರು ಪಿಚಕಾರಿಯಂತೆ ಚಿಮ್ಮುತ್ತದೆ. ಈ ಮರದ ಬೀಜಗಳು ಚಪ್ಪಟೆಯಾದ, ತೆಳುವಾದ ಮತ್ತು ಅಗಲವಾದ ರೆಕ್ಕೆಗಳನ್ನು ಹೊಂದಿರುತ್ತವೆ.

ನೀರಕಾಯಿ ಮರದ ಕಾಂಡ ಮೃದು. ಆದುದರಿಂದ, ಮರಗಳಲ್ಲಿ ರಂಧ್ರ ಕೊರೆಯುವ ಬಾರ್ಬೆಟ್ ಗಳಂತಹ ಪಕ್ಷಿಗಳು ಗೂಡು ಮಾಡಲು ಈ ಮರವನ್ನು ಆಶ್ರಯಿಸುತ್ತವೆ. ಹೂವಿನ ಪರಾಗವು ದುಂಬಿಗಳಿಗೆ ಮಾರಕವಾಗಿರುವುದು ವಿಶೇಷ. ತನ್ನ ಬುಡದಲ್ಲಿ ಇತರ ಯಾವುದೇ ಸಸ್ಯಗಳನ್ನು ಬೆಳೆಯಲು ಬಿಡುವುದಿಲ್ಲ ಮತ್ತು ಅಕ್ಕಪಕ್ಕದ ಕಟ್ಟಡಗಳಿಗಿಂತ, ಮರಗಳಿಗಿಂತ ಎತ್ತರಕ್ಕೆ ಸ್ಪರ್ಧಾತ್ಮಕವಾಗಿ ಬೆಳೆಯುವುದರಿಂದ ಇದನ್ನು ವಿಶ್ವದ ಅತ್ಯಂತ ಆಕ್ರಮಣಕಾರಿ ಸಸ್ಯಗಳಲ್ಲಿ ಒಂದು ಎಂದು ಪರಿಗಣಿಸಲಾಗಿದೆ.



ಛಾಯಾ ಓಕ್ ಬಾಪಟ್



ಇದನ್ನು ಹೆಚ್ಚಾಗಿ ಆಲಂಕಾರಿಕ ವೃಕ್ಷವಾಗಿ ಬೆಳೆಸುತ್ತಾರೆ. ಇದರ ಕಾಂಡವು ದುರ್ಬಲವಾಗಿರುವುದರಿಂದ ಪೆಟ್ಟಿಗೆಗಳನ್ನು ತಯಾರಿಸಲು ಮತ್ತು ಟೂತ್‌ಪಿಕ್ ತಯಾರಿಸಲು ಮಾತ್ರ ಬಳಸುತ್ತಾರೆ. ಉಳಿದಂತೆ ಉರುವಲಾಗಿ ಬಳಸಬಹುದು. ಕೆಲವು ಜನಾಂಗಗಳಲ್ಲಿ ಇದರ ಕಾಂಡ ಮತ್ತು ಎಲೆಗಳನ್ನು ಔಷಧವಾಗಿಯೂ ಬಳಸುವುದುಂಟು.

## ನಿತ್ಯ ಅನ್ನದಾನ- ತಿಂಗಳ ಅಂಕಿಅಂಶ

| ಕ್ರ. ಸಂ | ನಿತ್ಯ ಅನ್ನದಾನದ ಕೇಂದ್ರ/ ಊಟದ ಸಮಯ | ಮಾರ್ಚ್‌ನಲ್ಲಿ ವಿತರಿಸಲಾದ ಊಟದ ಅಂದಾಜು ಸಂಖ್ಯೆ | ಈವರೆಗೂ ಒಟ್ಟು ಊಟದ ಅಂದಾಜು ಸಂಖ್ಯೆ |
|---|---|---|---|
| 1 | ಅದಮ್ಯ ಚೇತನ ಕೆಂಪೇಗೌಡ ನಗರ, ಗವಿಪುರ 2.00 ರಿಂದ 3.00 | 4650 | 1,93,050 |
| 2 | ಜಯನಗರ 4ನೇ ಹಂತ, ಕನ್ನಡ ಕಟ್ಟೆ ಜೈನ್ ಟೆಂಪಲ್ ಮುಂಭಾಗ 12.30 ರಿಂದ 1.30 | 3100 | 1,26,700 |
| 3 | ನಗರ್ತಪೇಟೆಯ ನಗರೇಶ್ವರ ದೇವಸ್ಥಾನ 12.30 ರಿಂದ 1.30 | 3100 | 1,07,900 |
| 4 | ಶ್ರೀ ಲೇಕ್ ವ್ಯೂ ಮಹಾಗಣಪತಿ ದೇವಸ್ಥಾನ, ಟ್ಯಾಂಕ್ ಬಂಡ್ ರಸ್ತೆ ಹಲಸೂರು ಕೆರೆ ಪಕ್ಕ ಬೆಂಗಳೂರು 12.30 ರಿಂದ 1.30 | 4650 | 73,500 |
| 5 | ಅನಂತಸ್ಮೃತಿ ವನ, ಲಾಲ್ ಬಾಗ್ ಪಶ್ಚಿಮ ದ್ವಾರ ಎದುರು (ಮ.12:30ರಿಂದ 1:30ರವರೆಗೆ) | 4650 | 29,270 |
| | ಒಟ್ಟು ಅಂದಾಜು | **20,150** | **5,49,620** |

## ಹಸಿರು ಭಾನುವಾರ - ತಿಂಗಳ ಅಂಕಿಅಂಶ

| ಸಂಖ್ಯೆ | ಸ್ಥಳ | ಭಾಗವಹಿಸಿದವರು | ಚಟುವಟಿಕೆ |
|---|---|---|---|
| **429** **17/03/24** | ಬೆಂಗಳೂರು ವಿಶ್ವವಿದ್ಯಾಲಯದ ಬಯೋ ಪಾರ್ಕ್ | ಅದಮ್ಯ ಚೇತನ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಬಿಎಂಎಸ್ ಕಾಲೇಜು ಹಾಗೂ ನೃಪತುಂಗ ಕಾಲೇಜು ವಿದ್ಯಾರ್ಥಿಗಳು, ಹಸಿರು ಯೋಧರು, ಅದಮ್ಯ ಚೇತನ ಸಿಬ್ಬಂದಿ. | ಸ್ಥಳದ ಸ್ವಚ್ಛತೆ, ಗಿಡಗಳಿಗೆ ನೀರುಣಿಸಲಾಯಿತು |
| **430** **24/03/24** | ಬೆಂಗಳೂರು ವಿಶ್ವವಿದ್ಯಾಲಯದ ಬಯೋ ಪಾರ್ಕ್ | ಬಿಎಂಎಸ್ ಕಾಲೇಜು ಹಾಗೂ ನೃಪತುಂಗ ಕಾಲೇಜು ವಿದ್ಯಾರ್ಥಿಗಳು, ಹಸಿರು ಯೋಧರು ಅದಮ್ಯ ಚೇತನ ಸಿಬ್ಬಂದಿ. | ಸ್ಥಳದ ಸ್ವಚ್ಛತೆ, ಗಿಡಗಳಿಗೆ ನೀರುಣಿಸಲಾಯಿತು |
| **431** **31/03/24** | ಬೆಂಗಳೂರು ವಿಶ್ವವಿದ್ಯಾಲಯದ ಬಯೋ ಪಾರ್ಕ್ | ಬಿಎಂಎಸ್ ಕಾಲೇಜು ಹಾಗೂ ನೃಪತುಂಗ ಕಾಲೇಜು ವಿದ್ಯಾರ್ಥಿಗಳು, ಹಸಿರು ಯೋಧರು ಅದಮ್ಯ ಚೇತನ ಸಿಬ್ಬಂದಿ. | ಸ್ಥಳದ ಸ್ವಚ್ಛತೆ, ಗಿಡಗಳಿಗೆ ನೀರುಣಿಸಲಾಯಿತು |
| **432** **07/04/24** | ಬೆಂಗಳೂರು ವಿಶ್ವವಿದ್ಯಾಲಯದ ಬಯೋ ಪಾರ್ಕ್ | ಅದಮ್ಯ ಚೇತನ ಸಂಸ್ಥೆ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಬಿಎಂಎಸ್ ಕಾಲೇಜು ನೃಪತುಂಗ ಕಾಲೇಜು ವಿದ್ಯಾರ್ಥಿಗಳು, ಹಸಿರು ಯೋಧರು ಒಟ್ಟು 100ಕ್ಕೂ ಅಧಿಕ ಪರಿಸರ ಸ್ನೇಹಿಗಳು. | ಸ್ಥಳದ ಸ್ವಚ್ಛತೆ, ಗಿಡಗಳಿಗೆ ನೀರುಣಿಸಲಾಯಿತು |
| **433** **14/04/24** | ಬೆಂಗಳೂರು ವಿಶ್ವವಿದ್ಯಾಲಯದ ಬಯೋ ಪಾರ್ಕ್ | ಅದಮ್ಯ ಚೇತನ ಸಂಸ್ಥೆ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಬಿಎಂಎಸ್ ಕಾಲೇಜು, ನೃಪತುಂಗ ಕಾಲೇಜು ವಿದ್ಯಾರ್ಥಿಗಳು, ಹಸಿರು ಯೋಧರು ಸೇರಿ ಒಟ್ಟು 100ಕ್ಕೂ ಅಧಿಕ ಪರಿಸರ ಸ್ನೇಹಿಗಳು. | ಸ್ಥಳದ ಸ್ವಚ್ಛತೆ, ಗಿಡಗಳಿಗೆ ನೀರುಣಿಸಲಾಯಿತು |

# ಉತ್ತರ ಭಾರತದ ಚುನಾವಣೆಗಳಲ್ಲಿ ಅನಂತ ತಂತ್ರಕೌಶಲ




ಮಹಾರಾಷ್ಟ್ರ. ಪ್ರಮೋದ್ ಮಹಾಜನ್ ಮತ್ತು ಗೋಪೀನಾಥ ಮುಂಡೆ ಅನಂತಕುಮಾರರಿಗೆ ಆತ್ಮೀಯರಾಗಿದ್ದರು. ಹೀಗಾಗಿ, ಕರ್ನಾಟಕಕ್ಕೆ ಸಮೀಪವಿರುವ, ಕನ್ನಡಿಗರು ಬಹುಸಂಖ್ಯೆಯಲ್ಲಿದ್ದ ಸೋಲಾಪುರ, ಕೊಲ್ಲಾಪುರ, ಅಕ್ಕಲಕೋಟೆ ಮುಂತಾದ ಪ್ರದೇಶಗಳಲ್ಲಿ ಅನಂತಕುಮಾರರು ಸ್ವಯಂಪ್ರೇರಿತರಾಗಿ ವ್ಯಾಪಕವಾಗಿ ಪ್ರಚಾರ ಮಾಡಿದ್ದರು. ಮುಂದೆ ಮಹಾರಾಷ್ಟ್ರದ ಪ್ರತಿಯೊಂದು ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಗಳಲ್ಲಿ ಸಾರ್ವಜನಿಕ ಸಭೆಗಳನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಅನಂತಕುಮಾರ್ ಮಹಾರಾಷ್ಟ್ರದ ಪ್ರಭಾರಿಯಾಗಿ ಯಾವತ್ತೂ ಕೆಲಸ ಮಾಡಿರಲಿಲ್ಲ. ಆದರೆ ಚುನಾವಣೆಯಲ್ಲಿ ಸಹಾಯ ಮಾಡುವ ಸಲುವಾಗಿ ಮಹಾರಾಷ್ಟ್ರಕ್ಕೆ ತೆರಳಿ ನಾಲ್ಕೈದು ಜಿಲ್ಲೆಗಳ ಜವಾಬ್ದಾರಿಯನ್ನು ತಾವಾಗಿಯೇ ವಹಿಸಿಕೊಳ್ಳುತ್ತಿದ್ದರು. ಅನಂತಕುಮಾರ್ ಯಾವ ಊರಿಗೆ ಹೋದರೂ ಅಲ್ಲೊಂದು ತಂಡ ನಿರ್ಮಾಣವಾಗುತ್ತಿತ್ತು. ಸಾಮಾನ್ಯವಾಗಿ ಆಯಾ ಪ್ರದೇಶಗಳಲ್ಲಿ ವಸತಿ ಹೂಡುವುದು ಅವರ ಅಭ್ಯಾಸ. ಬೆಳಿಗ್ಗೆ ಎದ್ದಕೂಡಲೇ ಅವರ ಚುನಾವಣಾ ಕಾರ್ಯ ಪ್ರಾರಂಭವಾಗುತ್ತಿತ್ತು. ಉಪಾಹಾರ ಸೇವಿಸುವ ಸಂದರ್ಭದಲ್ಲೂ ೩೦-೪೦ ಜನರ ಜೊತೆ ಮಾತನಾಡುತ್ತ ಅವರಿಗೆ ಮುಂದಿನ ಕಾರ್ಯತಂತ್ರದ ಬಗ್ಗೆ ಮಾಹಿತಿ ನೀಡುತ್ತಿದ್ದರು. ನಂತರ ತಮ್ಮ ತಂಡದೊಡನೆ, ಮನೆಮನೆಗಳಿಗೆ ಭೇಟಿ, ಮೆರವಣಿಗೆ. ಮಧ್ಯಾಹ್ನದ ಭೋಜನವನ್ನು ಕೆಲವರು ತಮ್ಮ ಮನೆಗಳಲ್ಲಿ ಏರ್ಪಡಿಸುತ್ತಿದ್ದರು. ಸುಮಾರು ೧೦೦ರಿಂದ ೨೦೦ ಜನರು ಭೋಜನದಲ್ಲಿ ಭಾಗಿಯಾಗುತ್ತಿದ್ದರು. ಊಟದ ನಂತರ ಮತ್ತೆ ಪ್ರಚಾರ, ಚುನಾವಣಾ ಸಭೆಗಳು. ರಾತ್ರಿ ೯ ಗಂಟೆಯ ಸುಮಾರಿಗೆ ಊಟ, ನಂತರ ಮತ್ತೆ ಮುಂದಿನ ದಿನದ ಕಾರ್ಯತಂತ್ರದ ಕುರಿತು ಚರ್ಚೆ. ಮಧ್ಯದಲ್ಲಿ ಸಣ್ಣ ವಾಯುವಿಹಾರ, ಬೀಡಾ ಸೇವನೆ, ಮತ್ತೆ ಕೆಲಸ - ಇದು ಬೆಳಗಿನ ಜಾವ ೨ ಗಂಟೆಯವರೆಗೂ ನಡೆಯುತ್ತಿತ್ತು! ಇದನ್ನು ಅನಂತಕುಮಾರರ ಚುನಾವಣಾ ಕಾಲದ ದಿನಚರಿ ಎನ್ನಬಹುದು. ಎಲ್ಲಾ ರಾಜ್ಯಗಳಲ್ಲೂ ಅವರು ಇದೇ ದಿನಚರಿಯನ್ನು ಅನುಸರಿಸುತ್ತಿದ್ದರು. ೨೦೧೬-೧೭ರಲ್ಲಿ ಸುಮಾರು ಹತ್ತು ಜಿಲ್ಲೆಗಳ ಉಸ್ತುವಾರಿಯನ್ನು ವಹಿಸಿಕೊಂಡಿದ್ದರು. ಉಸ್ತುವಾರಿಯಾಗಿ ಮಹಾರಾಷ್ಟ್ರಕ್ಕೆ ಇದೇ ಅವರ ಕೊನೆಯ ಭೇಟಿಯಾಯಿತು.

ಚುನಾವಣಾ ಉಸ್ತುವಾರಿಯಾಗಿ ಅನಂತಕುಮಾರ್ ಕಾರ್ಯಕರ್ತರ ವಿಶ್ವಾಸವನ್ನು ಮೊದಲು ಗಳಿಸಿಕೊಳ್ಳುತ್ತಿದ್ದರು. ಹಗಲಿರುಳೂ ಸಂಚರಿಸುತ್ತ ಕಾರ್ಯಕರ್ತರನ್ನು ಅವರವರ ಸ್ಥಳಗಳಲ್ಲಿಯೇ ಭೇಟಿ ಮಾಡುತ್ತಿದ್ದರು. ಇದರಿಂದ ಕಾರ್ಯಕರ್ತರ ಸಮಯ ಉಳಿಯುತ್ತಿತ್ತು. ಅವರ ಸಮಸ್ಯೆಗಳ ಪರಿಚಯವಾಗುತ್ತಿತ್ತು. ಕಾರ್ಯಕರ್ತರಿಗೆ ಬೇಕಾದ ಹಣಕಾಸಿನ ನೆರವು ಮತ್ತು ಇತರ ವ್ಯವಸ್ಥೆಗಳನ್ನು ವಿಳಂಬವಿಲ್ಲದೆ ಏರ್ಪಡಿಸಲು ಸಾಧ್ಯವಾಗುತ್ತಿತ್ತು. ಎಲ್ಲಕ್ಕಿಂತ ಮಿಗಿಲಾಗಿ, ಕಾರ್ಯಕರ್ತರಿಗೆ ತಮ್ಮ ನಾಯಕರನ್ನು ತಮ್ಮ ಸ್ಥಳದಲ್ಲಿಯೇ ಭೇಟಿಯಾಗುವ ಅವಕಾಶ ದೊರೆತು ಒಂದು ರೀತಿಯ ಆತ್ಮೀಯತೆ ಬೆಳೆಯುತ್ತಿತ್ತು. (ಮುಂದಿನ ಸಂಚಿಕೆಯನ್ನು ನೋಡಿ)

ಪುಟ 1 ರಿಂದ ತೊಡರುಗಳನ್ನು ಎದುರಿಸಬೇಕಾಯಿತು. ಬಹುತೇಕ ಮತದಾರರಿಗೆ ಪಕ್ಷದ ಹೆಸರೇ ತಿಳಿದಿರಲಿಲ್ಲ. ಅವರಿಗೆ ಹಿಂದಿಯೂ ಸರಿಯಾಗಿ ಬರುತ್ತಿರಲಿಲ್ಲ. ಯಾವ ಊರುಗಳಿಗೂ ಕಾರು, ಜೀಪುಗಳ ಮೂಲಕ ತಲುಪುವುದು ಕಷ್ಟದ ಮಾತಾಗಿತ್ತು. ಆದರೆ ಅನಂತಕುಮಾರ್ ಮುಂಚೂಣಿಯಲ್ಲಿ ನಿಂತು ಮುನ್ನಡೆಸುವ ನಾಯಕರು. ಬೈಕ್ ರ್‍ಯಾಲಿಯ ನೇತೃತ್ವವನ್ನು ಅವರೇ ವಹಿಸಿದ್ದರು. ನಕ್ಸಲೀಯರ ದಾಳಿಗೆ ಬಲಿಯಾಗಬಾರದೆಂಬ ಉದ್ದೇಶದಿಂದ ರ್‍ಯಾಲಿಗೆ ನಾಲ್ಕು ಬದಲಿ ಮಾರ್ಗಗಳನ್ನು ಯೋಜಿಸಿದ್ದರು. ಕಾರ್ಯಕರ್ತರಿಗೂ ಮಾರ್ಗದ ಸಂಪೂರ್ಣ ಮಾಹಿತಿಯಿರಲಿಲ್ಲ. ಆದರೂ, ರ್‍ಯಾಲಿಯಶಸ್ವಿಯಾಯಿತು. ಅನಂತಕುಮಾರರ ನಾಯಕತ್ವದ ಸಂಪೂರ್ಣ ಪರೀಕ್ಷೆ ನಡೆದ ಚುನಾವಣೆಯಿದು ಎಂದರೆ ಅತಿಶಯೋಕ್ತಿಯಲ್ಲ.

ಅಟಲ್, ಅದ್ವಾನಿ, ಪ್ರಮೋದ್ ಮಹಾಜನ್, ಸುಷ್ಮಾ ಸ್ವರಾಜ್, ಮನೋಹರ ಪರಿಕ್ಕರ್, ರಾಜನಾಥ ಸಿಂಗ್, ನಿತಿನ್ ಗಡ್ಕರಿ ಮುಂತಾದ ಪರಿಪೂರ್ಣ, ಪೂರ್ಣಕಾಲಿಕ ರಾಜಕಾರಣಿಗಳ ಸಾಲಿಗೆ ಸೇರುವ ಅಪರೂಪದ ರಾಜಕಾರಣಿ, ಅನಂತಕುಮಾರ್. ಇವರು ಚುನಾವಣೆಯ ಕಾಲದ ರಾಜಕಾರಣಿಯಲ್ಲ; ಚುನಾವಣೆಯ ಸೋಲು-ಗೆಲುವುಗಳನ್ನು ಲೆಕ್ಕಿಸದೆ ಎರಡು ಚುನಾವಣೆಗಳ ನಡುವಣ ಸಮಯದಲ್ಲಿ ಪಕ್ಷದ ಬಲವರ್ಧನೆಗಾಗಿ ನಿರಂತರವಾಗಿ ಶ್ರಮಿಸುತ್ತಿದ್ದ ನಿಷ್ಠಾವಂತ ಕಾರ್ಯಕರ್ತ.

ಇಂದು ಚುನಾವಣಾ ತಂತ್ರಜ್ಞರೆಂಬ ಒಂದು ವರ್ಗವೇ ಇದೆ. ಇಂತಹ ತಜ್ಞರು ಒಂದು ರಾಜ್ಯದ ಚುನಾವಣೆಯಲ್ಲಿ ಯಶಸ್ವಿಯಾದರೆ ಇನ್ನೊಂದು ಚುನಾವಣೆಯಲ್ಲಿ ವಿಫಲರಾಗುವುದನ್ನು ನೋಡುತ್ತಿದ್ದೇವೆ. ಆದರೆ ತಾವು ಉಸ್ತುವಾರಿ ವಹಿಸಿದ ಎಲ್ಲ ಚುನಾವಣೆಗಳಲ್ಲಿ ಯಶಸ್ಸಿನ ಅಭೂತಪೂರ್ವ ಸಾಧನೆ ತೋರಿಸಿರುವ ಅಪೂರ್ವ ಸಾಧಕ- ಅನಂತಕುಮಾರ್ ! ಭಾರತೀಯ ಜನತಾ ಪಕ್ಷದ ಹೆಸರೇ ಪರಿಚಿತವಾಗಿಲ್ಲದ ಪ್ರದೇಶಗಳಲ್ಲಿ, ಕಾರ್ಯಕರ್ತರ ಮತ್ತು ಸಂಪನ್ಮೂಲಗಳ ಕೊರತೆಯಿದ್ದ ಕಾಲದಲ್ಲಿ, ಪಕ್ಷದ ತತ್ತ್ವಗಳಿಗೆ ಹಿಂಸಾತ್ಮಕ ಅಸಹನೆ ತೋರುತ್ತಿದ್ದ ಪ್ರದೇಶಗಳಲ್ಲಿ, ಸಂಚಾರ ವ್ಯವಸ್ಥೆಯೇ ಇಲ್ಲದ ಪ್ರದೇಶಗಳಲ್ಲಿ, ಭಾಷೆಬರದ ಅಪರಿಚಿತ ರಾಜ್ಯಗಳಲ್ಲಿ ಕೆಲಸ ಮಾಡಿ ಅಪಾರ ಯಶಸ್ಸು ಗಳಿಸಿದ ಅನಂತಕುಮಾರರ ಕಾರ್ಯಶೈಲಿಯನ್ನು, ತಂತ್ರಗಳನ್ನು ಇಂದಿನ ಯುವರಾಜಕಾರಣಿಗಳ ಮಾರ್ಗದರ್ಶನಕ್ಕಾಗಿಯಾದರೂ ದಾಖಲಿಸುವ ಕೆಲಸ ನಡೆಯಬೇಕಾಗಿದೆ.

ಭಾರತೀಯ ಜನತಾ ಯುವ ಮೋರ್ಚಾ ಅಧ್ಯಕ್ಷರಾಗಿ ೧೯೮೭ರಲ್ಲಿ ರಾಜಕೀಯ ಪ್ರವೇಶ ಮಾಡಿದ ಅನಂತಕುಮಾರರು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದದ್ದು ೧೯೯೬ರಲ್ಲಿ. ಆದರೆ ೧೯೯೧ರಲ್ಲೇ, ಅಂದರೆ ತಮ್ಮ ೩೨ನೆಯ ವಯಸ್ಸಿಗೇ ಕರ್ನಾಟಕದ ಜೊತೆಗೆ ಇನ್ನೊಂದು ರಾಜ್ಯದಲ್ಲಿ ಚುನಾವಣಾ ಪ್ರಚಾರ ನಡೆಸಿದ್ದರೆ, ಅದು



## "ಕೀಳರಿಮೆ ಮೀರುವುದೇ ಯಶಸ್ಸಿನ ಮೊದಲ ಮೆಟ್ಟಿಲು"
**– ಮಂಗಳಾ ಕಿರಣ್**

## ತಿಂಗಳ ವರದಿ
(15 ಮಾರ್ಚ್ - 15 ಏಪ್ರಿಲ್ 2024)





ಬೆಂಗಳೂರಿನ ಅನಂತಕುಮಾರ್ ಪ್ರತಿಷ್ಠಾನ, ಅದಮ್ಯ ಚೇತನ ಸಂಸ್ಥೆ ಹಾಗೂ ಹುಬ್ಬಳ್ಳಿಯ ಅನಂತ ಪ್ರೇರಣಾ ಕೇಂದ್ರದ ಆಶ್ರಯದಲ್ಲಿ 2024ರ ಏಪ್ರಿಲ್ 06ರಂದು ಹುಬ್ಬಳ್ಳಿಯ ವಿಜಯನಗರದಲ್ಲಿರುವ ಅನಂತ ಪ್ರೇರಣಾ ಕೇಂದ್ರದ ಸಭಾಂಗಣದಲ್ಲಿ ಗ್ರಾಮೀಣ ಮಹಿಳೆಯರ ನೇತೃತ್ವ ವಿಕಸನಕ್ಕಾಗಿ ನಡೆದ "ಗ್ರಾಮ ಚೇತನ" ಶಿಬಿರ ಯಶಸ್ವಿಯಾಗಿ ನಡೆಯಿತು. ಗದಗ ಜಿಲ್ಲೆಯ ಮುಳಗುಂದ, ಧಾರವಾಡ ಜಿಲ್ಲೆಯ ಕುಂದಗೋಳ ಮತ್ತು ಧಾರವಾಡ ತಾಲೂಕಿನ ಹೆಬ್ಬಳ್ಳಿ ಗ್ರಾಮದ ಮಹಿಳೆಯರು ಈ ಶಿಬಿರದಲ್ಲಿ ಪಾಲ್ಗೊಂಡಿದ್ದರು.

ಹುಬ್ಬಳ್ಳಿಯ ಸ್ಟೇಷನ್ ರಸ್ತೆಯಲ್ಲಿರುವ ಶ್ರೀ ಈಶ್ವರ ದೇವಸ್ಥಾನದ ಟ್ರಸ್ಟಿ ಶ್ರೀ ಲಕ್ಷ್ಮಣರಾವ್ ಓಕ್ ಅವರು ದೀಪ ಬೆಳಗುವ ಮೂಲಕ ಶಿಬಿರವನ್ನು ಉದ್ಘಾಟಿಸಿದರು. ನಂತರ ಮಾತನಾಡುತ್ತ, "ಪ್ರತಿಯೊಂದು ವ್ಯಕ್ತಿಯ ಯಶಸ್ಸು ಆತನ ಪ್ರಯತ್ನವನ್ನು ಅವಲಂಬಿಸಿರುತ್ತದೆ. ಸಾಧಿಸಬೇಕೆನ್ನುವ ಮಹಿಳೆಯರು ಮೊದಲು ದೃಢ ಪ್ರಯತ್ನದಲ್ಲಿ ನಂಬಿಕೆ ಇಡಿ; ಅಲ್ಲಿ ಖಂಡಿತವಾಗಿಯೂ ಯಶಸ್ಸು ಇರುತ್ತದೆ" ಎಂದು ಸಲಹೆ ನೀಡಿದರು.

ಆಡು-ಕುರಿ-ಕೋಳಿ ಸಾಕಣೆ ಮಾತ್ರವಲ್ಲ; ಔಷಧೀಯ ಸಸ್ಯಗಳ ಕೃಷಿ ಮೂಲಕ ಮಹಿಳಾ ಸ್ವಾವಲಂಬನೆಯ ರಾಯಭಾರಿಯಂತಿರುವ ಗದಗ ಜಿಲ್ಲೆಯ ಮುಳಗುಂದದ ಶ್ರೀಮತಿ ಮಂಗಳಾ ಕಿರಣ್ ನೀಲಗುಂದ "ಮಹಿಳಾ ಉದ್ಯಮ ಹಾಗೂ ಆರ್ಥಿಕ ಸಬಲೀಕರಣ" ವಿಷಯವಾಗಿ ಉಪನ್ಯಾಸ ನೀಡಿ, "ಮಹಿಳೆಯರು ಮೊದಲು ತಮ್ಮ ಕೀಳರಿಮೆಯನ್ನು ಮೀರಬೇಕು. ಈ ಮೀರುವಿಕೆಯನ್ನೇ ತಮ್ಮ ಸಾಧನೆಯ ಮೊದಲ ಮೆಟ್ಟಿಲಾಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. "ನನ್ನ ಜಮೀನಿನಲ್ಲಿ ಔಷಧಿ ಸಸ್ಯಗಳನ್ನು ಬೆಳೆದಿದ್ದೇನೆ. ತರಕಾರಿಯನ್ನೂ ಬೆಳೆದಿದ್ದೇನೆ. ಅವುಗಳನ್ನು ಮನೆಯಲ್ಲಿಯೂ ಬಳಸುತ್ತೇವೆ, ಇತರರಿಗೂ ಮಾರಾಟ ಮಾಡುತ್ತೇವೆ. ಇಂತಹ ಚಟುವಟಿಕೆಗಳ ಮೂಲಕ ನಾವು ಆರ್ಥಿಕವಾಗಿ ಸಬಲರಾಗಬಹುದು. ತಾಂತ್ರಿಕತೆಯನ್ನು ಬಳಸಿ ನಾವೇ ಮಾರುಕಟ್ಟೆಯನ್ನು ವಿಸ್ತರಿಸಿಕೊಳ್ಳಬಹುದು. ಆಕಳ ಸೆಗಣಿ, ಗೋಮೂತ್ರಕ್ಕೆ ಈಗ ಭಾರೀ ಬೇಡಿಕೆ ಇದೆ. ಈ ಬೇಡಿಕೆಗಳನ್ನು ಪೂರೈಸುವ ವ್ಯವಹಾರ ಜ್ಞಾನ ನಮ್ಮದಾಗಬೇಕು. ನಾನು ಈಗ ಬೆರಣಿ-ಗೋಮೂತ್ರ ಪೂರೈಸುವ ವ್ಯವಹಾರ ಆರಂಭಿಸಿದ್ದೇನೆ. ಮೊಬೈಲ್ ಮೂಲಕ ಗ್ರಾಹಕರು ನಿತ್ಯವೂ ಆರ್ಡರ್ ಮಾಡುತ್ತಿದ್ದಾರೆ. ಕೃಷಿ ಪದವೀಧರೆಯಾದ ನಾನು ಪಶುಸಾಕಣೆಗೆ ಇಳಿದಾಗ ಅನೇಕರು ಗೇಲಿ ಮಾಡಿದ್ದರು. ನನ್ನಿಂದೇನಾಗುತ್ತದೆ ಎನ್ನುವ ಕೀಳರಿಮೆ ಬಿಡಿ; ಆರ್ಥಿಕವಾಗಿ ಸಬಲರಾದರೆ ಮಾತ್ರ ಮನೆಯಲ್ಲೂ, ಸಮಾಜದಲ್ಲೂ ಮಹಿಳೆಯರ ಗೌರವ ಹೆಚ್ಚುತ್ತದೆ. ಅದನ್ನು ಸಾಬೀತು ಮಾಡುವುದು ಮಹಿಳೆಯರಿಗೆ ಅನಿವಾರ್ಯ" ಎಂದೂ ಅವರು ಹೇಳಿದರು.

**ಬಹುತೇಕ ಸಮಸ್ಯೆಗಳಿಗೆ ಮಹಿಳೆಯರೇ ಪರಿಹಾರ ಶ್ರೀ ಪ್ರಭಾಕರ ದೇಶಪಾಂಡೆ:** ಧಾರವಾಡ ಜಿಲ್ಲೆಯ ಜೀರಗಿವಾಡ ಗ್ರಾ. ಪಂ. ಸದಸ್ಯ ಶ್ರೀ ಪ್ರಭಾಕರ ದೇಶಪಾಂಡೆಯವರು "ಮಹಿಳೆಯರ ನೇತೃತ್ವ ವಿಕಾಸ" ಕುರಿತು ಉಪನ್ಯಾಸ ನೀಡಿ, "ಮಹಿಳೆಯರಲ್ಲಿ ನೇತೃತ್ವ ವಹಿಸುವ ಸಾಮರ್ಥ್ಯವಿದೆ. ಬಹುತೇಕ ಸಮಸ್ಯೆಗಳಿಗೆ ಮಹಿಳೆಯರೇ ಪರಿಹಾರ ನೀಡಬಲ್ಲರು" ಎಂದರು. "ತಾಯಿಯನ್ನು ಗೌರವಿಸದ ಯಾವುದೇ ದೇಶವು ಎಷ್ಟೇ ಶ್ರೀಮಂತವಾಗಿದ್ದರೂ ಅಭಿಮಾನಪಡುವಂಥದ್ದಲ್ಲ. ಸಾಂಸ್ಕೃತಿಕವಾಗಿ ತಾಯಿಯ ನೇತೃತ್ವ ಪ್ರಮುಖವಾಗುತ್ತದೆ. ಆಗಲೇ, ಸಮಾಜದ ಸರ್ವಾಂಗೀಣ ಅಭಿವೃದ್ಧಿಯೂ ಸಾಧ್ಯವಾಗುತ್ತದೆ" ಎಂದು ಹೇಳಿ ತಂದೆತಾಯಿಯರನ್ನು ವೃದ್ಧಾಶ್ರಮಕ್ಕೆ ಕಳಿಸುವ ಸಂಸ್ಕೃತಿ ಒಳ್ಳೆಯದಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಅನಂತ ಪ್ರೇರಣಾ ಕೇಂದ್ರದ ಶ್ರೀಮತಿ ವೀಣಾ ಅಠವಲೆ ಶಿಬಿರದ ಗೀತೆ ಹಾಡಿ, ಸ್ವಾಗತಿಸಿದರು. ಶ್ರೀ ವೆಂಕಟೇಶ ಮಾನು ಅತಿಥಿಗಳನ್ನು ಪರಿಚಯಿಸಿದರು. ಅನಂತ ಪ್ರೇರಣಾ ಕೇಂದ್ರದ ಶ್ರೀಮತಿ ಸ್ವಾತಿ ಪಟ್ಟೇದ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಅದಮ್ಯ ಚೇತನ, ಅನಂತಕುಮಾರ್ ಪ್ರತಿಷ್ಠಾನ ಹಾಗೂ ಅನಂತ ಪ್ರೇರಣಾ ಕೇಂದ್ರದ ಸೇವಾ ಚಟುವಟಿಕೆಗಳನ್ನು ವಿವರಿಸಿ, ಕೊನೆಯಲ್ಲಿ ವಂದಿಸಿದರು.

**ಗಣ್ಯರ ಭೇಟಿ:** ಬೆಂಗಳೂರಿನ ಮಾಜಿ ಕಾರ್ಪೋರೇಟರ್ ವೇದವ್ಯಾಸ ಭಟ್ ಹಾಗೂ ವಿವಿ ಪುರಂ ಶ್ರೀ ಸುಬ್ರಮಣ್ಯ ಸ್ವಾಮಿ ದೇವಾಲಯದ ಟ್ರಸ್ಟಿ, ಶ್ರೀ ಅಜಯ್ ಕದಂ, ಇಂಡಿಯನ್ ಓವರ್ ಸೀಸ್ ಬ್ಯಾಂಕ್ ನಿವೃತ್ತ ಅಧಿಕಾರಿ ಹಾಗೂ ಉಡುಪಿ ನಿವಾಸಿ ಶ್ರೀ ಪಿ.ಎಸ್. ಆಚಾರ್ಯ, ಆಂಧ್ರಬ್ಯಾಂಕ್ ನಿವೃತ್ತ ಅಧಿಕಾರಿ ಹಾಗೂ ಬೆಂಗಳೂರು ನಿವಾಸಿ, ಶ್ರೀ ಮುರಳೀಧರ, ಆಡಿಟರ್ ಶ್ರೀ ಯೋಗೀಶ್ ಆಚಾರ್ಯ, ತಮಿಳುನಾಡಿನ ಕರೂರು ಜಿಲ್ಲೆಯ ಕರೂರು ಶಾರದಾ ಆಶ್ರಮದ ನೀಲಕಾಂತಪ್ರಿಯಾ ಹಾಗೂ ಆರ್. ವಿಜಿಕಾ, ಕನ್ನಡ ಲೇಖಕಿ ಶ್ರೀಮತಿ ಶಾಲಿನಿಮೂರ್ತಿ ಹಾಗೂ ಬೆಂಗಳೂರಿನ ಶ್ರೀಮತಿ ಶೈಲಜಾಸಿಂಹ, ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಮಾವಿನಗುಂಡಿಯ ಸಾವಯವ ಕೃಷಿಕ ಮಹಿಳೆ ಅಮೃತ ಹೆಗಡೆ ಹಾಗೂ ಕಥೆಗಾರ್ತಿ-ಸಾಮಾಜಿಕ ಕಾರ್ಯಕರ್ತೆ ಸಹನಾ ಹೆಗಡೆ, ಬೆಂಗಳೂರಿನ ಜಯನಗರದ ಕನ್ನಡ ಕಟ್ಟೆ ಬಳಗದ ರಮೇಶ್ ರಾಜು ಹಾಗೂ ಇತರ ಸದಸ್ಯರು ಅದಮ್ಯ ಚೇತನ ಸಂಸ್ಥೆಗೆ ಭೇಟಿ ನೀಡಿದ್ದರು. ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ಗೋಗಿ ಗ್ರಾಮದ ನಿವೃತ್ತ ಶಿಕ್ಷಕ ಹಾಗೂ ಸಾಹಿತಿ, ಸಂಶೋಧಕ ಶ್ರೀ ಡಿ.ಎನ್. ಅಕ್ಕಿ, ಪತ್ನಿ ಶ್ರೀಮತಿ ಸುಮಂಗಲಾ ಅಕ್ಕಿ ಹಾಗೂ ವಿಜಯ ಗೋಗಿ ಅನಂತ ಪ್ರೇರಣಾ ಕೇಂದ್ರಕ್ಕೆ ಭೇಟಿ ನೀಡಿದ್ದರು.

ಅನಂತಪಥ

Editorial Advisory Committee: **Tejaswini Ananthkumar / Gopal T.S / K. Janardhana Thunga**
Layout: **Ananthakumar Pratishthana** Assistance: **Sanjay R / Venkatesh Manu / Trivikram Joshi**
Inputs: **Poornaprazna / Veena Athavale / ACF / AKP**
Photographs: **Gopal TS / Internet Sources / AKP / ACF**
Acknowledgements: **GM Inamdar / Beluru Sudarshana / Sanjay Upadhyaya / Chaya Bapat**
Printed at: **Rashtrothana Mudranalaya, Chamrajpet, Bengaluru**
Published by: **Tejaswini Ananthkumar**

For-AnanthKumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 I Email: ananth.path@akp.org.in

ಸ್ಪಷ್ಟನೆ: ಆನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು:ಈ ಪಠ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

## ಅದಮ್ಯ ಸೇವಾ ( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )



ಹುಬ್ಬಳ್ಳಿಯ ಅನಂತ ಪ್ರೇರಣಾ ಕೇಂದ್ರವನ್ನು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ವೀಕ್ಷಿಸಿದರು. ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಶ್ರೀ ನಂದಕುಮಾರ್, ವಿಷ್ಣುಕಾಂತ ಚಟಪಲ್ಲಿ, ಗುಡ್ಡು ಇನಾಂದಾರ್ ಮತ್ತು ಇತರ ಗಣ್ಯರು ಜೊತೆಯಲ್ಲಿದ್ದರು.



ಬೆಂಗಳೂರಿನ ಗಿರಿನಗರದ ಆಡೆನ್ ಪಬ್ಲಿಕ್ ಶಾಲೆಯ 9ನೇ ತರಗತಿಯ ವಿದ್ಯಾರ್ಥಿಗಳು ಅದಮ್ಯ ಚೇತನಕ್ಕೆ ಭೇಟಿ ಮಾಡಿ, ತಾವು ಖರೀದಿಸಿದ ತರಕಾರಿಗಳನ್ನು ದೇಣಿಗೆ ನೀಡಿದ ಭಾವುಕ ಕ್ಷಣ.



ಬೆಂಗಳೂರಿನ ಅನಂತಕುಮಾರ್ ಪ್ರತಿಷ್ಠಾನ ಹಾಗೂ ಅದಮ್ಯ ಚೇತನ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಹುಬ್ಬಳ್ಳಿಯ ಅನಂತ ಪ್ರೇರಣಾ ಕೇಂದ್ರದಲ್ಲಿ (2024ರ ಏ. 6) ನಡೆದ "ಗ್ರಾಮೀಣ ಮಹಿಳೆಯರಿಗಾಗಿ ನೇತೃತ್ವ ವಿಕಸನ ಶಿಬಿರ"ವನ್ನು ಶ್ರೀ ಈಶ್ವರ ದೇವಸ್ಥಾನದ ಟ್ರಸ್ಟಿ ಶ್ರೀ ಲಕ್ಷ್ಮಣರಾವ್ ಓಕ್ ಉದ್ಘಾಟಿಸಿದರು.



ಹುಬ್ಬಳ್ಳಿಯ ವಿಜಯನಗರದ ಅನಂತ ಪ್ರೇರಣಾ ಕೇಂದ್ರದಲ್ಲಿ ಸಂಸ್ಕೃತ ಭಾರತೀ (ಕರ್ನಾಟಕ) ಸಂಸ್ಥೆಯವರು 2024ರ ಏ-02ರಿಂದ ಏ-11ರವರೆಗೆ ನಡೆಸಿಕೊಟ್ಟ ಸಂಸ್ಕೃತ ಸಂಭಾಷಣಾ ಶಿಬಿರ.



ಬೆಂಗಳೂರು ವಿ.ವಿ. ಆವರಣದಲ್ಲಿ ಮಹಾತ್ಮಾ ಗಾಂಧಿ ಭವನದ ಬಳಿ ಅದಮ್ಯ ಚೇತನ ಸಂಸ್ಥೆಯ 433ನೇ ಹಸಿರು ಭಾನುವಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.



ಬೆಂಗಳೂರಿನ ಅದಮ್ಯ ಚೇತನ ಸಂಸ್ಥೆಯಲ್ಲಿ 2024ರ ಏ. 17ರಂದು ಸಿಬ್ಬಂದಿಗಳು ಶ್ರೀ ರಾಮನವಮಿ ಆಚರಿಸಿದರು.



ಖ್ಯಾತ ಗಾಯಕ ಶ್ರೀ ಪ್ರವೀಣ ಡಿ. ರಾವ್ ಹಾಗೂ ತಂಡದ ಕಲಾವಿದರು ಅಯೋಧ್ಯೆಯಲ್ಲಿ ಶ್ರೀರಾಮನ ಪ್ರಾಣ ಪ್ರತಿಷ್ಠಾಪನಾ ದಿನದಿಂದ (ಜ.22) ಅದಮ್ಯ ಚೇತನ ಸಂಸ್ಥೆಯ ಅನ್ನದಾಸೋಹ ಕೇಂದ್ರದಲ್ಲಿ ಪ್ರಸಾದ ಸ್ವೀಕರಿಸಿ, ಭಕ್ತರಿಗೂ ಉಣಬಡಿಸಿದರು.



ತಮಿಳುನಾಡಿನ ಕರೂರುನಲ್ಲಿರುವ ಶಾರದಾ ಆಶ್ರಮದ 55 ವಿದ್ಯಾರ್ಥಿನಿಯರು ಅದಮ್ಯ ಚೇತನ ಸಂಸ್ಥೆಗೆ ಭೇಟಿ ನೀಡಿದ ಸಂದರ್ಭ

## ಅನಂತ ಚಿತ್ರಸಂಪುಟ

ಪ್ರಜಾಪ್ರಭುತ್ವದ ಉತ್ಸವ ಎಂದರೆ ಸಾರ್ವತ್ರಿಕ ಚುನಾವಣೆಗಳು. ಅನಂತಕುಮಾರರು ಚುನಾವಣಾ ತಂತ್ರಗಾರಿಕೆಯಲ್ಲಿ ನಿಸ್ಸೀಮರು. ತಾವೂ ಸತತವಾಗಿ ಗೆಲ್ಲುವುದರ ಜೊತೆಗೆ ದೇಶದ ವಿವಿಧ ರಾಜ್ಯಗಳಲ್ಲಿ ಆಯಾ ರಾಜ್ಯಗಳ ಪರಿಸ್ಥಿತಿಗೆ ತಕ್ಕಂತೆ ತಂತ್ರಗಾರಿಕೆ ರಚಿಸಿ, ಎಂತಹ ಕಠಿಣ ಪರಿಸ್ಥಿತಿಯಲ್ಲಿಯೂ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಂಡು ಬರುತ್ತಿದ್ದರು.















